# ಕೆನರಾ ವೆಲ್‌ಫೇರ್ ಟ್ರಸ್ಟ್

## ಅಂಕೋಲಾ (ಉ.ಕ.)

**ಟ್ರಸ್ಟಿನ ಎಲ್ಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಹಿರಿಯ ಸಹಾಯಕರ,**

**ಮೆನೆಜಿಂಗ ಕಮಿಟಿಯ ಸದಸ್ಯರ ಹಾಗೂ ಟ್ರಸ್ಟಿನ ಪದಾಧಿಕಾರಿಗಳ**

**ವಾರ್ಷಿಕ ಸಭೆ – ದಿನಾಂಕ 09–07–2011**

## Report of the Administrative Officer

## ಆಡಳಿತಾಧಿಕಾರಿ ವರದಿ

# Report of the Administrative Officer

# ಆಡಳಿತಾಧಿಕಾರಿ ವರದಿ

ಕೆನರಾ ವೆಲ್‌ಫೆರ್ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ, ಹಿರಿಯ ಉಪನ್ಯಾಸಕರ/ಮೆನೆಜಿಂಗ ಕಮಿಟಿಯ ಸದಸ್ಯರ ಹಾಗೂ ಟ್ರಸ್ಟಿನ ಪದಾಧಿಕಾರಿಗಳ ವಾರ್ಷಿಕ ಸಭೆಯನ್ನು ಪ್ರತಿ ವರ್ಷದಂತೆ ಈ ವರ್ಷವೂ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರ ಸಲಹೆಯಂತೆ ಇಂದು ದಿನಾಂಕ 09–07–2011 ರಂದು ಗೋಖಲೆ ಸೆಂಟಿನರಿ ಕಾಲೇಜಿನ ಯು.ಜಿ.ಸಿ.ಹಾಲಿನಲ್ಲಿ ಕರೆಯಲಾಗಿದೆ.

ಇಂದಿನ ಈ ಸಭೆಗೆ ಆಗಮಿಸಿದ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರಿಗೆ, ಟ್ರಸ್ಟಿಗಳಾದ ಶ್ರೀಯುತ ವಾಮನ ಪೈಯವರಿಗೆ, ಪ್ರೊ.ಜಿ.ವಿ.ಭಟ್ಟರವರಿಗೆ ಹಾಗೂ ಮೆನೇಜಿಂಗ್ ಕಮಿಟಿ ಸದಸ್ಯರಿಗೆ ಸಂಸ್ಥೆಗಳ ಎಲ್ಲ ಮುಖ್ಯಸ್ಥರಿಗೆ, ಹಿರಿಯ ಉಪನ್ಯಾಸಕರಿಗೆ, ಹಿರಿಯ ಸಹ ಶಿಕ್ಷಕರಿಗೆ, ಆಫೀಸ ಸಹಾಯಕರಿಗೆ, ಆಮಂತ್ರಿತರಿಗೆ ಟ್ರಸ್ಟಿನ ಪರವಾಗಿ ಹಾಗೂ ವೈಯಕ್ತಿಕವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಇಂದು ನಡೆಯುತ್ತಿರುವ ಈ ಸಭೆ ಶೈಕ್ಷಣಿಕವಾಗಿ ಹಾಗೂ ಆಡಳಿತಾತ್ಮಕವಾಗಿ ಬಹಳ ಮಹತ್ವಪೂರ್ಣವಾದುದು. ಈ ಸಭೆಯಲ್ಲಿ ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಪ್ರಗತಿ ಪರಿಶೀಲನೆ, ಸಾಧನೆ, ಲೆಕ್ಕಪತ್ರ ನಿರ್ವಹಣೆ, ಅಭಿವೃದ್ಧಿ ಕಾರ್ಯಗಳು ಮತ್ತು ಪಠ್ಯ–ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಮಾಡಿದ ಸಾಧನೆ ಹಾಗೂ 2011–2012ನೇ ಸಾಲಿನ ಕಾರ್ಯಯೋಜನೆ ಕುರಿತು ವಿವರವಾಗಿ ಚರ್ಚಿಸಿ ನಿರ್ಣಯ ಕೈಗೊಂಡು ಅದನ್ನು ಜಾರಿಗೊಳಿಸುವ ಬಗ್ಗೆ ಚಿಂತನೆ ನಡೆಸಬೇಕಾಗಿದೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಾಣ ಮಾಡುವ ಹಾಗೂ ಮೂಲಭೂತ ಸೌಕರ್ಯ ಒದಗಿಸುವ ಕುರಿತು ಅಧ್ಯಕ್ಷರು ಸಂಸ್ಥೆಯ ಮುಖ್ಯಸ್ಥರೊಡನೆ, ಟ್ರಸ್ಟಿಗಳೊಂದಿಗೆ, ಮೆನೆಜಿಂಗ ಕಮಿಟಿಯ ಸದಸ್ಯರೊಂದಿಗೆ ಮುಕ್ತವಾಗಿ ಚರ್ಚಿಸಿ ಸೂಕ್ತ ನಿರ್ಣಯ ತೆಗೆದುಕೊಳ್ಳಲಿದ್ದಾರೆ. ಟ್ರಸ್ಟು ನಡೆಸುತ್ತಿರುವ ಈ ವಾರ್ಷಿಕ ಸಭೆ ಅಭಿವೃದ್ಧಿ ದೃಷ್ಟಿಯಿಂದ, ಆಡಳಿತಾತ್ಮಕ ದೃಷ್ಟಿಯಿಂದ ಹಾಗೂ ಸಂಪನ್ಮೂಲ ಕ್ರೋಢಿಕರಿಸುವ ದೃಷ್ಟಿಯಿಂದ ಅತ್ಯಂತ ಪ್ರಯೋಜನಕಾರಿಯಾಗಲಿದೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಮಾಹಿತಿ, ಹಾಜರಾತಿ, ಪರೀಕ್ಷಾ ಪರಿಣಾಮ, ಸಿಬ್ಬಂದಿಗಳ ಸಮಗ್ರ ಮಾಹಿತಿ, ಲೆಕ್ಕ ಪತ್ರ ನಿರ್ವಹಣೆ, ಮುಂತಾದ ವಿಷಯಗಳ ಕುರಿತು ಮಾಹಿತಿಯನ್ನು Online ಮೂಲಕ ಟ್ರಸ್ಟ್ ಆಫೀಸಿನಲ್ಲಿ ಪಡೆಯಲು Robosoft Technologies Pvt. Ltd., Udupi ಇವರೊಡನೆ ಟ್ರಸ್ಟು ಒಂದು ಒಪ್ಪಂದವನ್ನು ಫೆಬ್ರುವರಿ 2011 ರಲ್ಲಿ ಮಾಡಿಕೊಂಡಿರುತ್ತದೆ. ಈ ವಿಭಾಗದ ಮಾಹಿತಿ ಕ್ರೋಢಿಕರಿಸಲು / ತರಬೇತಿ ನೀಡಲು ಶ್ರೀ ಪ್ರಶಾಂತ ರಾವ್ ಅವರನ್ನು Special Coordinator ಆಗಿ ಟ್ರಸ್ಟು ನೇಮಕ ಮಾಡಿಕೊಂಡಿರುತ್ತದೆ. ಪ್ರಾರಂಭಿಕ ಹಂತವಾಗಿ ಈ ಮೇಲಿನ ಮಾಹಿತಿಯನ್ನು ಕ್ರೋಢಿಕರಿಸಲು ಅಂಕೋಲಾ, ಕಾರವಾರ ಮತ್ತು ದಾಂಡೇಲಿ ಕೇಂದ್ರದಲ್ಲಿ Robo Vidya Software ಅಳವಡಿಸಲಾಗಿದೆ. ಈ ಬಗ್ಗೆ ಎಲ್ಲ ಸಂಸ್ಥೆಗಳಿಗೆ ಪ್ರತ್ಯೇಕ Email I.D. ಯನ್ನು ನೀಡಿ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಎಲ್ಲಾ ಸಂಸ್ಥೆಗಳು ಕೇಂದ್ರ ಕಛೇರಿಯಿಂದ ಕೇಳಿದ ಮಾಹಿತಿಗಳನ್ನು ಕೂಡಲೆ Email ಮೂಲಕ ಕಳುಹಿಸಲು ತಿಳಿಸಲಾಗಿದೆ. 2010–2011ನೇ ಸಾಲಿನ ಮಾಹಿತಿ ಸಂಪೂರ್ಣವಾಗಿ ಕ್ರೋಢಿಕರಿಸಲಾಗಿದೆ.

ಎಲ್ಲ ಸಂಸ್ಥೆಗಳು ಈ ಬಗ್ಗೆ ಗಮನ ಹರಿಸಿ ಕಾರ್ಯ ಪ್ರವೃತ್ತರಾದರೆ ಆಡಳೀತಾತ್ಮಕವಾಗಿ ತುಂಬಾ ಅನುಕೂಲವಾಗುತ್ತದೆ. ಸಂಸ್ಥೆಯ ಮೂಖ್ಯಸ್ಥರಿಗೆ ಹಾಗೂ ಆಫೀಸ್ ಸಿಬ್ಬಂದಿಯವರಿಗೆ ಒಂದು ಕಾರ್ಯಗಾರವನ್ನು ಶೀಘ್ರದಲ್ಲಿ ಏರ್ಪಡಿಸಿ ಸಂಪೂರ್ಣ ಮಾಹಿತಿ ನೀಡಲಾಗುವದು. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಸಂಸ್ಥೆಯ Special Coordinator ಇವರನ್ನು ಸಂಪರ್ಕಿಸಲು ಸೂಚಿಸಿದೆ.

ಟ್ರಸ್ಟಿನ ಮಾನ್ಯ ಅಧ್ಯಕ್ಷರಾದ ಶ್ರೀಯುತ ಎಸ್.ಪಿ.ಕಾಮತರವರು ಪ್ರತಿ ವರ್ಷ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸಂಸ್ಥೆಯ ಮುಖ್ಯಸ್ಥರ ಸಭೆಯನ್ನು ಕಳೆದ ಅನೇಕ ವರ್ಷಗಳಿಂದ ನಡೆಸಿಕೊಂಡು ಬಂದಿದ್ದಾರೆ. ಈ ಸಭೆಯಲ್ಲಿ ಕೈಗೊಳ್ಳುವ ಪ್ರತಿಯೊಂದು ನಿರ್ಣಯಗಳ ಪ್ರಯೋಜನ ಎಲ್ಲ ಸಂಸ್ಥೆಗಳಿಗೆ ಲಭಿಸಬೇಕು. ಟ್ರಸ್ಟಿನ ಎಲ್ಲ ಸಂಸ್ಥೆಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಮೂಡಿಬರಬೇಕು ಹಾಗೂ ಎಲ್ಲ ಸಂಸ್ಥೆಗಳಲ್ಲಿ ಪ್ರಾಮಾಣಿಕತೆ, ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಇರಬೇಕೆನ್ನುವದು ಅಧ್ಯಕ್ಷರ ಪ್ರಾಮಾಣಿಕ ಅನಿಸಿಕೆ ಹಾಗೂ ಕಳಕಳಿಯಾಗಿದೆ. ಇದನ್ನು ಸಾಕಾರಗೊಳಿಸುವದು ನಮ್ಮ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಟ್ರಸ್ಟಿನ ಧ್ಯೇಯ ಧೋರಣೆಯನ್ನು ಕಾರ್ಯರೂಪಕ್ಕೆ ತರುವಲ್ಲಿ ಎಲ್ಲರೂ ಪ್ರಾಮಾಣಿಕವಾಗಿ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಬೇಕಾಗಿದೆ.

2010–2011ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳು ನಿರ್ವಹಿಸಿದ ಕಾರ್ಯ, ಅಭಿವೃದ್ಧಿ, ಸಾಧನೆ, ಲೆಕ್ಕಪತ್ರ ನಿರ್ವಹಣೆ, ಶಿಕ್ಷಣ ಸಂಸ್ಥೆಗಳ ವಾರ್ಷಿಕ ಶೈಕ್ಷಣಿಕ ಪ್ರಗತಿ ಕುರಿತು ಸಂಕ್ಷಿಪ್ತ ವರದಿಯನ್ನು ಸಲ್ಲಿಸುವದು ನನ್ನ ಕರ್ತವ್ಯವಾಗಿದೆ.

# ಪರಿವಿಡಿ


| ಅ. ನಂ. | ವಿಷಯ | ಪುಟ ಸಂ. |
|---|---|---|
| 1. | ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ | 05–06 |
| 2. | ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ | 06–09 |
| 3. | ಶೈಕ್ಷಣಿಕ ಪ್ರಗತಿ: 2010–2011ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಯಲ್ಲಿ ಮಾಡಿದ ಸಾಧನೆ | 10–14 |
| 4. | ಶೈಕ್ಷಣಿಕ ವರ್ಷದಲ್ಲಿ ವಿಶೇಷ ಸಾಧನೆ ಮಾಡಿದ ಶಿಕ್ಷಕರ, ನಿವೃತ್ತಿ ಹೊಂದಿದವರ ಹಾಗೂ ಭಡ್ತಿ ಪಡೆದವರ ಮಾಹಿತಿ | 14–16 |
| 5. | ಪಠ್ಯ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳ ಸಾಧನೆ | 16–18 |
| 6. | ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಹಾಗೂ ಖಾಲಿ ಇರುವ ಹುದ್ದೆಗಳ ಕುರಿತು | 18–19 |
| 7. | ಟ್ರಸ್ಟು ಪ್ರಕಟಿಸಿದ ಪುಸ್ತಕ | 19–20 |
| 8. | ವಿಜ್ಞಾನ ಕಾರ್ಯಗಾರ | 20–21 |
| 9. | ಸಂಸ್ಥೆಗಳಿಗೆ ಡೆಸ್ಕು ಮತ್ತು ಬೆಂಚುಗಳನ್ನು ಪೂರೈಸಿದ ಕುರಿತು | 21 |
| 10. | ಸಮವಸ್ತ್ರದ ಕುರಿತು | 21–22 |
| 11. | ಟ್ರಸ್ಟಿನ ತ್ರೈಮಾಸಿಕ ಸಂಚಿಕೆ | 22–23 |
| 12. | ಪಿ.ಎಂ.ಪ್ರೌಢ ಶಾಲೆಯಲ್ಲಿ ಆಂಗ್ಲ ಮಾಧ್ಯಮ ವಿಭಾಗ ಪ್ರಾರಂಭ | 23 |
| 13. | ಸುವರ್ಣ ಮಹೋತ್ಸವ ಆಚರಣೆ | 23–24 |
| 14. | ಟ್ರಸ್ಟಿನ ವಿವಿಧ ಕೇಂದ್ರಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕೆಲಸಗಳು | 24–29 |
| 15. | ಕ್ರುಗರ ಫೌಂಡೇಶನ ಕಾರವಾರ ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡುವ ಸಹಾಯಧನ | 29–31 |
| 16. | ಉತ್ತಮ ನಾಳೆಗಾಗಿ ಪರಿವರ್ತನಾಗಾರರು (Project Change Makers for a Better Tomorrow) | 31–32 |
| 17. | ಟ್ರಸ್ಟಿಗೆ ಬರುವ ಆದಾಯದ ಕುರಿತು | 32–33 |
| 18. | ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ | 33–34 |
| 19. | ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ | 34–37 |
| 20. | ಸಾಮಾನ್ಯ ಸೂಚನೆಗಳು | 37–38 |
| 21. | ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ | 39–41 |

## 1. ಶೈಕ್ಷಣಿಕ ಹಾಗೂ ಸಾಮಾಜಿಕ ವಿಚಾರದ ಕುರಿತು ಟ್ರಸ್ಟಿನ ಧ್ಯೇಯ:

1. ಟ್ರಸ್ಟಿನ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಎಲ್ಲ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ಸಿಗುವುದರ ಜೊತೆಗೆ ಶಾಲಾ, ಕಾಲೇಜಗಳಲ್ಲಿ ಒಳ್ಳೆಯ ವಾತಾವರಣ, ಒಳ್ಳೆಯ ಪರಿಸರ ದೊರೆಯುವಂತೆ ಪ್ರಯತ್ನಿಸುವದು. ಶಿಕ್ಷಣದ ಗುಣ ಮಟ್ಟ ಸುಧಾರಿಸುವದರ ಜೊತೆಗೆ ಪಠ್ಯ ಪಠ್ಯೇತರ ವಿಷಯದಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡುವಂತೆ ಎಲ್ಲ ಮುಲಭೂತ ಸೌಲಭ್ಯ ಒದಗಿಸಿ ಶಿಕ್ಷಣದಲ್ಲಿ ಮಹತ್ವಪೂರ್ಣ ಬದಲಾವಣೆ ತರುವಲ್ಲಿ ಎಲ್ಲರೂ ಪ್ರಾಮಾಣಿಕವಾದ ಪ್ರಯತ್ನ ಮಾಡುವದು.
2. "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಂಡು ಕಾರ್ಯ ನಿರ್ವಹಿಸುವದು.
3. ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವಂತೆ ಹಾಗೂ ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಪ್ರಾಮಾಣಿಕ ಪ್ರಯತ್ನ ಮಾಡುವದು.
4. ಪಠ್ಯೇತರ ಚಟುವಟಿಕೆಗಳಲ್ಲೂ ಕೂಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ದಿಕ್ಕಿನಲ್ಲಿ ಗಮನ ಹರಿಸುವದು.
5. ಟ್ರಸ್ಟಿನ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿರುವ ಗ್ರಾಮೀಣ ಭಾಗದಲ್ಲಿ ಸಾಕ್ಷರತೆ ಪ್ರಮಾಣ ನೂರಕ್ಕೆ ನೂರರಷ್ಟು ಆಗುವಂತೆ ನಮ್ಮ ಸಂಸ್ಥೆಗಳು ಸ್ವಯಂಪ್ರೇರಣೆಯಿಂದ ಕಾರ್ಯಯೋಜನೆಗಳನ್ನು ಹಾಕಿಕೊಂಡು ಸಂಸ್ಥೆಯ ಸಿಬ್ಬಂದಿಗಳನ್ನು ಹಾಗೂ ವಿದ್ಯಾರ್ಥಿಗಳನ್ನು ಸಾಮೂಹಿಕವಾಗಿ ತೊಡಗಿಸಿಕೊಂಡು ಪ್ರಯತ್ನಿಸುವದು.
6. ಸರಕಾರದ ಮಳೆಕೊಯ್ಲು ಯೋಜನೆ, ಸಂಪೂರ್ಣ ನಿರ್ಮಲಗ್ರಾಮ ಯೋಜನೆಗಳಿಗೆ ನಮ್ಮ ಸಂಸ್ಥೆಗಳು ತಮ್ಮ ಭಾಗಗಳಲ್ಲಿ ಕೈಜೋಡಿಸಿ ಅವು ಯಶಸ್ವಿಯಾಗುವಂತೆ ನೋಡಿಕೊಳ್ಳುವದು.
7. ಪ್ರತಿಯೊಂದು ಸಂಸ್ಥೆಯವರು (ಪ್ರಾಥಮಿಕ, ಪ್ರೌಢ ಮತ್ತು ಕಾಲೇಜುಗಳು ಸೇರಿದಂತೆ) ಕಡ್ಡಾಯವಾಗಿ ಪಾಲಕರ ಸಭೆಯನ್ನು ಕರೆದು ವಿದ್ಯಾರ್ಥಿಗಳ ಶೈಕ್ಷಣಿಕ ವಿಚಾರವಾಗಿ, ನಡವಳಿಕೆಯ ವಿಚಾರವಾಗಿ, ಹಾಜರಾತಿಯ ವಿಚಾರವಾಗಿ ಮುಕ್ತವಾಗಿ ಚರ್ಚಿಸಿ ಸಲಹೆ–ಸೂಚನೆಗಳನ್ನು ನೀಡುವದು ಮತ್ತು ಅವರಿಂದ ಬರುವ ಸಲಹೆ ಸೂಚನೆಗಳಿದ್ದರೆ, ಆಕ್ಷೇಪಗಳಿದ್ದರೆ ಅವನ್ನು ದಾಖಲೆಗೊಳಪಡಿಸಿ ಪರಿಹಾರದ ದಾರಿ ಕಂಡುಕೊಳ್ಳುವದು.

8. ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡು, ತಾವು ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಿ ವಿದ್ಯಾರ್ಥಿ ಪಾಲಕರ ಹಾಗೂ ಸಮಾಜದ ಗೌರವ ಸಂಪಾದಿಸಿಕೊಂಡು ಕಾರ್ಯ ನಿರ್ವಹಿಸುವದು.

ಈ ವಿಷಯದ ಕುರಿತು ದಿನಾಂಕ 03-07-2010ರಂದು ನಡೆದ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರ ಸಭೆಯಲ್ಲಿ ಚರ್ಚಿಸಿ ಎಲ್ಲ ಸಂಸ್ಥೆಗಳ ಮುಖ್ಯಸ್ಥರು 2010-11ನೇ ಶೈಕ್ಷಣಿಕ ವರ್ಷದಿಂದ ಈ ಯೋಜನೆಗಳನ್ನು ಪ್ರಾಮಾಣಿಕವಾಗಿ ಕಾರ್ಯರೂಪಕ್ಕೆ ತರುವಂತೆ ಪ್ರಯತ್ನಿಸಬೇಕೆಂದು ಅಧ್ಯಕ್ಷರು ಸಲಹೆ ನೀಡಿದ್ದರು. ಈ ಸಲಹೆಯನ್ನು ಯಾವ ರೀತಿಯಲ್ಲಿ ಕಾರ್ಯರೂಪಕ್ಕೆ ತರಲಾಗಿದೆ ಎನ್ನುವದರ ಬಗ್ಗೆ ಸಂಸ್ಥೆಯ ಮುಖ್ಯಸ್ಥರು ತಮ್ಮ ವರದಿಯಲ್ಲಿ ಸಂಕ್ಷಿಪ್ತವಾಗಿ ತಿಳಿಸಬೇಕು.

## 2. ವಿದ್ಯಾರ್ಥಿಗಳ ದಾಖಲಾತಿ ಹಾಗೂ ಸಿಬ್ಬಂದಿಗಳ ವಿವರ:

2010-2011ನೇ ಶೈಕ್ಷಣಿಕ ವರ್ಷದಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ-ಶಿಕ್ಷಕೇತರ ಸಿಬ್ಬಂದಿಯವರ ವಿವರ ಈ ಕೆಳಗಿನಂತಿದೆ.

| ಅ. ನಂ. | ಶಾಲೆ/ಕಾಲೇಜಿನ ಹೆಸರು | ವಿದ್ಯಾರ್ಥಿಗಳ ಸಂಖ್ಯೆ | ಕಾರ್ಯ ನಿರ್ವಹಿಸುತ್ತಿರುವವರ ಸಂಖ್ಯೆ | | | |
|---|---|---|---|---|---|---|
| | | | ಅನುದಾನಿತ | | ಆಡಳಿತ ಮಂಡಳಿ ಮಾಡಿದ ನೇಮಕಾತಿ | |
| | | | ಅಧ್ಯಾಪಕರು | ಅಧ್ಯಾಪಕೇತರರು | ಅಧ್ಯಾಪಕರು | ಅಧ್ಯಾಪಕೇತರರು |
| | **DEGREE COLLEGES** | | | | | |
| 1. | Gokhale Centenary College, Ankola | 320 | 25 | 10 | 06 | 17 |
| 2. | Divekar College Of Commerce, Karwar | 294 | 10 | 06 | 04 | 06 |
| 3. | KWT's College of Education, Dandeli | 77 | -- | -- | 09 | 02 |
| 4. | B.C.A. College, Karwar | 47 | -- | -- | 07 | -- |
| | **Total** | **738** | **35** | **16** | **26** | **25** |

| | | | | | | |
|---|---|---|---|---|---|---|
| | **JUNIOR COLLEGES** | | | | | |
| 5. | Gokhale Centenary P.U. College, Ankola | 360 | 01 | 02 | 13 | 06 |
| 6. | Divekar P.U. Commerce College, Karwar | 206 | 01 | -- | 07 | 03 |
| 7. | J.V.Comp. Jr. College, Dandeli | 245 | 07 | 06 | 01 | 01 |
| 8. | J.V.Comp. Jr. College, Kadtoka | 174 | 06 | 02 | 02 | -- |
| 9. | J.V.Comp. Jr. College, Shirali, Bhatkal | 538 | 07 | 01 | 05 | 02 |
| 10. | P.M. Comp. Jr. College, Ankola | 152 | -- | -- | 06 | 03 |
| 11. | Divekar P.U. Science College, Karwar | 106 | -- | -- | 05 | 02 |
| | **Total** | **1781** | **22** | **11** | **39** | **17** |


| | | | | | | |
|---|---|---|---|---|---|---|
| | **HIGH SCHOOLS** | | | | | |
| 12. | P.M. High School, Ankola | 628 | 14 | 03 | 04 | 03 |
| 13. | Janata Vidyalaya, Baad-Kagal, Kumta | 270 | 08 | -- | 02 | 05 |
| 14. | Janata Vidyalaya, Shirali, Bhatkal | 389 | 07 | 02 | 05 | 04 |
| 15. | Janata Vidyalaya, Dandeli | 898 | 20 | 02 | 08 | 05 |
| 16. | Janata Vidyalaya, Kadwad, Karwar | 133 | 07 | 01 | 01 | 01 |
| 17. | Janata Vidyalaya, Kasarkod, Honnavar | 272 | 05 | 02 | 06 | 01 |
| 18. | Janata Vidyalaya, Murdeshwar, Bhatkal | 661 | 08 | 01 | 13 | 03 |
| 19. | Janata Vidyalaya, Mirjan-Kodkani, Kumta | 387 | 08 | -- | 05 | 02 |
| 20. | Janata Vidyalaya, Kadtoka | 248 | 07 | 02 | 03 | 03 |
| 21. | Janata Vidyalaya, Mudga, Karwar | 137 | 05 | 01 | 02 | 02 |
| 22. | Janata Vidyalaya, Dhareshwar, Kumta | 170 | 07 | 02 | -- | -- |
| 23. | Janata Vidyalaya, Bedkani, Siddapur | 168 | 06 | -- | 02 | 01 |
| 24. | S.K.P. High School, Katgal, Kumta | 238 | 06 | 01 | 04 | 02 |
| 25. | Janata Vidyalaya, Anilgod, Honnavar | 123 | 07 | 02 | 01 | 01 |
| 26. | Janata Vidyalaya, Kulve-Baroor, Sirsi | 119 | 06 | 02 | 02 | 01 |
| | **Total** | **4841** | **121** | **21** | **58** | **34** |

| | | | | | | |
|---|---|---|---|---|---|---|
| | **PRIMARY AND PRE-PRIMARY SCHOOLS** | | | | | |
| 27. | English Medium Primary School, J.V.Campus, Dandeli | 1007 | 08 | -- | 08 | 04 |
| 28. | English Medium Nursery School, J.V.Campus, Dandeli | 298 | -- | -- | 04 | 03 |
| 29. | Kannada Medium Primary School, J.V.Campus, Dandeli | 364 | -- | -- | 07 | 01 |
| 30. | Kannada Medium Nursery School, Dandeli | 96 | -- | -- | 02 | 01 |
| 31. | Thakkar Bapa Nursery School, Ankola | 192 | -- | -- | 04 | 01 |
| 32. | Dr. Dinkar Desai Primary School, Ankola | 435 | -- | -- | 11 | 01 |
| 33. | Balamandir, Mundgod | 15 | -- | -- | 02 | 01 |
| 34. | J.V.Dinkar Pre-Primary School, Dhareshwar, Kumta | 80 | -- | -- | 06 | 01 |
| 35. | J.V.Dinkar Primary School, Dhareshwar, Kumta | 115 | -- | -- | 02 | 01 |
| 36. | Shrimat Sadyojat Shankarashram Swamiji Balamandir, Shirali, Bhatkal | 11 | -- | -- | 02 | 01 |
| | **Total** | **2613** | **08** | **--** | **48** | **15** |


| | | | | | | |
|---|---|---|---|---|---|---|
| | **OTHER SOCIAL SERVICE INSTITUTIONS** | | | | | |
| 37. | Thakkar Bapa Tailoring School, Ankola | **23** | -- | -- | **01** | -- |
| 38. | Tailoring School, Mundgod | **15** | | | | |
| 39. | Dinkar Kalaniketan Music School, Ankola | **05** | -- | -- | **01** | -- |
| 40. | Dinkar Kalaniketan Music School, Karwar | **25** | -- | -- | **01** | -- |
| 41. | Satyasai Balawadi & Balavikas Kendra, Kodibag, Karwar | **10** | -- | -- | **01** | -- |
| 42. | Computer Traing Centre, Karwar | **160** | | | | |
| 43. | Computer Training Centre, Dandeli | **660** | | | | |
| | **Total** | **898** | **--** | **--** | **04** | **--** |

## ABSTRACT

| Sl. | Institutions | Student Strength | Teachers (Aided) | Non-Teaching Staff (Aided) | Mgt. Appointed | |
|---|---|---|---|---|---|---|
| | | | | | Teachers | Non-Teaching Staff |
| **1.** | **Degree Colleges** | **738** | **35** | **16** | **26** | **25** |
| **2.** | **Junior Colleges** | **1781** | **22** | **11** | **39** | **17** |
| **3.** | **High Schools** | **4841** | **121** | **21** | **58** | **34** |
| **4.** | **Primary And Pre-Primary Schools** | **2613** | **08** | **--** | **48** | **15** |
| **5.** | **Other Institutions** | **898** | **--** | **--** | **04** | **--** |
| | **GRAND TOTAL** | **10871** | **186** | **48** | **175** | **91** |




ಟ್ರಸ್ಟು ನಡೆಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟು 10871 ವಿದ್ಯಾರ್ಥಿಗಳು 2010–2011ನೇ ಸಾಲಿನಲ್ಲಿ ವಿವಿಧ ತರಗತಿಗಳಿಗೆ ಪ್ರವೇಶ ಪಡೆದಿರುತ್ತಾರೆ. ವಿವಿಧ ಸಂಸ್ಥೆಗಳಲ್ಲಿ ಒಟ್ಟು 186 ಅನುಮೋದಿತ ಅಧ್ಯಾಪಕರು, 48 ಅಧ್ಯಾಪಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದರ ಹೊರತಾಗಿ ಆಡಳಿತ ಮಂಡಳಿಯಿಂದ ನೇಮಕಾತಿ ಹೊಂದಿದ ಪೂರ್ಣಕಾಲಿಕ ಹಾಗೂ ಅರೆಕಾಲಿಕ 175 ಅಧ್ಯಾಪಕರು ಹಾಗೂ 91 ಶಿಕ್ಷಕೇತರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಒಟ್ಟು 500 ಸಿಬ್ಬಂದಿಗಳು ಹಾಗೂ ಟ್ರಸ್ಟ ಕಾರ್ಯಾಲಯದಲ್ಲಿ 4 ಸಿಬ್ಬಂದಿಗಳು ಸೇರಿ ಒಟ್ಟು **504** ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.



## 3. ಶೈಕ್ಷಣಿಕ ಪ್ರಗತಿ: 2010–2011ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಎಸ್.ಎಸ್.ಎಲ್.ಸಿ. ಹಾಗೂ ಪಿ.ಯು.ಸಿ. ಪರೀಕ್ಷೆಯಲ್ಲಿ ಮಾಡಿದ ಸಾಧನೆ:

2010–2011ನೇ ಶೈಕ್ಷಣಿಕ ವರ್ಷದಲ್ಲಿ ಜರುಗಿದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಟ್ರಸ್ಟಿನ ಎಲ್ಲ ಸಂಸ್ಥೆಗಳಲ್ಲಿ ಪರೀಕ್ಷೆ ಪರಿಣಾಮದ ವಿವರ ಈ ಕೆಳಗಿನಂತೆ ಇದೆ.

| % of passing 2009-2010 | Name of the School | Students appeared | Students passed | % of passing 2010-2011 |
|---|---|---|---|---|
| *90.32* | **Janata Vidyalaya, Kulve-Baroor** | 44 | 44 | **100.00** |
| *88.88* | **Janata Vidyalaya, Kadwad** | 37 | 37 | **100.00** |
| *90.90* | **Janata Vidyalaya, Shirali** | 110 | 109 | **99.09** |
| *72.36* | **Janata Vidyalaya, Kadatoka** | 80 | 77 | **96.25** |
| *71.42* | **Janata Vidyalaya, Dandeli** | 236 | 226 | **95.76** |
| *73.07* | **S.K.P.High School, Katgal** | 65 | 62 | **95.38** |
| *67.36* | **P.M.High School, Ankola** | 165 | 156 | **94.55** |
| *90.38* | **Janata Vidyalaya, Mirjan** | 98 | 91 | **92.86** |
| *90.90* | **Janata Vidyalaya, Mudga** | 39 | 36 | **92.31** |
| *74.57* | **Janata Vidyalaya, Dhareshwar** | 52 | 47 | **90.38** |
| *77.17* | **Janata Vidyalaya Baad-Kagal** | 82 | 73 | **89.02** |
| *89.47* | **Janata Vidyalaya Anilgod** | 41 | 36 | **87.80** |
| *76.08* | **Janata Vidyalaya, Murdeshwar** | 220 | 190 | **86.36** |
| *58.33* | **Janata Vidyalaya, Bedkani** | 49 | 41 | **83.67** |
| *71.76* | **Janata Vidyalaya. Kasarkod** | 82 | 62 | **75.61** |



ಜನತಾ ವಿದ್ಯಾಲಯ ದಾಂಡೇಲಿ ಹೈಸ್ಕೂಲಿನ ವಿದ್ಯಾರ್ಥಿನಿ ಕುಮಾರಿ ರಾಜೇಶ್ವರಿ ಮೋಹನ ಹಾರ್ವಾಡೇಕರ ಇವರು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡಾ 98.88 ರಷ್ಟು ಅಂಕ ಪಡೆದು ರಾಜ್ಯಕ್ಕೆ ತೃತೀಯ ಸ್ಥಾನವನ್ನು ಪಡೆದಿರುತ್ತಾಳೆ. ಇವರ ಅಪೂರ್ವ ವೈಯಕ್ತಿಕ ಸಾಧನೆಗೆ ಹಾಗೂ ಶಾಲೆಗೆ ಟ್ರಸ್ಟು ಅಭಿನಂದಿಸುತ್ತದೆ.

ಮಾರ್ಚ 2011ರಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಮ್ಮ ಟ್ರಸ್ಟು ನಡೆಸುತ್ತಿರುವ ಜನತಾ ವಿದ್ಯಾಲಯ, ಕುಳವೆ–ಬರೂರ ಮತ್ತು ಕಡವಾಡ ಈ ಎರಡು ಶಾಲೆಗಳು ಶೇಕಡಾ 100 ರಷ್ಟು ಫಲಿತಾಂಶ ನೀಡಿರುವದು ಹೆಮ್ಮೆಯ ವಿಷಯ. ಇದು ಟ್ರಸ್ಟಿನ ಇತಿಹಾಸದಲ್ಲಿ ಒಂದು ಮಹತ್ವದ ಸಾಧನೆಯಾಗಿದೆ. ಪ್ರಥಮವಾಗಿ ನಾನು ಟ್ರಸ್ಟಿನ ಪರವಾಗಿ, ತಮ್ಮೆಲ್ಲರ ಪರವಾಗಿ ಹಾರ್ಧಿಕವಾದ ಅಭಿನಂದನೆಗಳನ್ನು ಈ ಶಾಲೆಯ ಮುಖ್ಯಸ್ಥರಿಗೂ, ಶಿಕ್ಷಕ ವೃಂದದವರಿಗೂ ಹಾಗೂ ವಿದ್ಯಾರ್ಥಿಗಳಿಗೂ ಸಲ್ಲಿಸುತ್ತೇನೆ. ಕಳೆದ ವರ್ಷ ಜನತಾ ವಿದ್ಯಾಲಯ ಶಿರಾಲಿ ಮತ್ತು ಜನತಾ ವಿದ್ಯಾಲಯ ಮುದ್ಗಾ ಶಾಲೆಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇಕಡಾ 90.9 ರಷ್ಟು ಫಲಿತಾಂಶ ನೀಡಿ ಪ್ರಥಮ ಸ್ಥಾನದಲ್ಲಿದ್ದರೆ ಈ ವರ್ಷ ಜನತಾ ವಿದ್ಯಾಲಯ ಕಡವಾಡ ಹಾಗೂ ಜನತಾ ವಿದ್ಯಾಲಯ ಕುಳವೆ–ಬರೂರ ಶಾಲೆಗಳು ಶೇಕಡಾ 100 ರಷ್ಟು ಫಲಿತಾಂಶ ನೀಡಿ ಪ್ರಥಮ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಶಿರಾಲಿ ಶಾಲೆಯು ಶೇಕಡಾ 99.09 ರಷ್ಟು ಫಲಿತಾಂಶ ನೀಡಿ ದ್ವಿತೀಯ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಕಡತೋಕಾ ಶಾಲೆಯು ಶೇಕಡಾ 96.25 ರಷ್ಟು ಫಲಿತಾಂಶ ನೀಡಿ ತೃತೀಯ ಸ್ಥಾನದಲ್ಲಿದೆ. ಶೇಕಡಾ 95.76 ರಷ್ಟು ಫಲಿತಾಂಶ ನೀಡಿದ ಜನತಾ ವಿದ್ಯಾಲಯ ದಾಂಡೇಲಿ ನಾಲ್ಕನೇ ಸ್ಥಾನದಲ್ಲಿದೆ. ಎಸ್.ಕೆ.ಪಿ.ಹೈಸ್ಕೂಲ,ಕತಗಾಲ ಶಾಲೆ ಶೇಕಡಾ 95.38 ರಷ್ಟು ಫಲಿತಾಂಶ ನೀಡಿ 5ನೇ ಸ್ಥಾನದಲ್ಲಿದ್ದರೆ, ಪಿ.ಎಂ.ಹೈಸ್ಕೂಲ, ಅಂಕೋಲಾ ಶಾಲೆ ಶೇಕಡಾ 94.55 ರಷ್ಟು ಫಲಿತಾಂಶ ನೀಡಿ 6ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಮಿರ್ಜಾನ ಶಾಲೆ 92.86 ರಷ್ಟು ಫಲಿತಾಂಶ ನೀಡಿ 7ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಮುದಗಾ ಶಾಲೆ ಶೇಕಡಾ 92.31 ರಷ್ಟು ಫಲಿತಾಂಶ ನೀಡಿ 8ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ, ಧಾರೇಶ್ವರ ಶಾಲೆ ಶೇಕಡಾ 90.38 ರಷ್ಟು ಫಲಿತಾಂಶ ನೀಡಿ 9ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಬಾಡ–ಕಾಗಾಲ 89.02 ರಷ್ಟು, ಅನಿಲಗೋಡ 87.80 ರಷ್ಟು, ಮುರ್ಡೇಶ್ವರ 86.36 ರಷ್ಟು, ಬೇಡಕಣಿ ಶೇಕಡಾ 83.67 ರಷ್ಟು ಫಲಿತಾಂಶ ನೀಡಿ ನಂತರದ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಕಾಸರಕೋಡ ಶಾಲೆ ಶೇಕಡಾ 75.61 ರಷ್ಟು ಫಲಿತಾಂಶ ನೀಡಿ ಕೊನೆಯ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಬೇಡಕಣಿ ಹಾಗೂ ಜನತಾ ವಿದ್ಯಾಲಯ ಕಾಸರಕೋಡ ಶಾಲೆ ಫಲಿತಾಂಶ ಜಿಲ್ಲಾ ಮಟ್ಟದ ಸರಾಸರಿಗಿಂತ ಕಡಿಮೆಯಾಗಿರುವದು ನಿರಾಶಾದಾಯಕವಾಗಿದೆ. ಮುಖ್ಯಾಧ್ಯಾಪಕರು ಹಾಗೂ ಶಿಕ್ಷಕ ವರ್ಗದವರು ಚಿಂತನೆ ಮಾಡಿ ಇದು ಪುನರಾವರ್ತನೆ ಆಗದಂತೆ ವಿಶೇಷ ಕಾಳಜಿ ವಹಿಸಿ ಕಾರ್ಯ ನಿರ್ವಹಿಸಬೇಕಾಗಿದೆ. ಬರುವ ವರ್ಷ ಶಾಲೆಯ ಮುಖ್ಯಾಧ್ಯಾಪಕರು

ಹಾಗೂ ಶಿಕ್ಷಕರು ಹೆಚ್ಚು ಶ್ರಮವಹಿಸಿ ಫಲಿತಾಂಶ ಉತ್ತಮಗೊಳಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುವಂತೆ ಈ ಮೂಲಕ ತಿಳಿಸಲಾಗಿದೆ.


ಎಸ್.ಎಸ್.ಎಲ್.ಸಿ. ಫಲಿತಾಂಶ ಶೇಕಡಾ 100 ರಷ್ಟು ಪಡೆದು ಮೊದಲ ಸ್ಥಾನ ಪಡೆದ ಜನತಾ ವಿದ್ಯಾಲಯ, ಶಿರಾಲಿ, ಜನತಾ ವಿದ್ಯಾಲಯ ಕಡವಾಡ ಹಾಗೂ ಕುಳವೆ–ಬರೂರ ಶಾಲೆಗಳು ಅಭಿನಂದನಾರ್ಹರು. ಈ ಶಾಲೆಗಳ ಮುಖ್ಯಾಧ್ಯಾಪಕರಿಗೆ, ಶಿಕ್ಷಕ ವೃಂದದವರಿಗೆ ಹಾಗೂ ವಿದ್ಯಾರ್ಥಿಗಳಿಗೆ ಟ್ರಸ್ಟಿನ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಉಳಿದ ಶಾಲೆಗಳೂ ಕೂಡಾ ಉತ್ತಮ ಫಲಿತಾಂಶ ನೀಡಿದ ಬಗ್ಗೆ ಅವರಿಗೂ ಟ್ರಸ್ಟಿನ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ. ಬರುವ ಶೈಕ್ಷಣಿಕ ವರ್ಷದಲ್ಲಿ ಎಲ್ಲ ಶಾಲೆಗಳು ಇನ್ನೂ ಉತ್ತಮ ಫಲಿತಾಂಶ ನೀಡಿ ಟ್ರಸ್ಟಿಗೆ, ಜಿಲ್ಲೆಗೆ ಹಾಗೂ ರಾಜ್ಯಕ್ಕೆ ಕೀರ್ತಿ ತರುವಂತೆ ಎಲ್ಲ ಶಿಕ್ಷಕ ವೃಂದದವರು ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲು ಬಯಸುತ್ತೇನೆ.

ದ್ವಿತೀಯ ಪದವಿ ಪೂರ್ವ ಪರೀಕ್ಷೆಯ ಫಲಿತಾಂಶವನ್ನು ಈ ಕೆಳಗೆ ನೀಡಲಾಗಿದೆ.

| % of passing 2009-2010 | Name of the College | Stream | Students appeared | Students passed | % of passing 2010-2011 |
|---|---|---|---|---|---|
| *91.20* | **J.V.Comp. Jr. College, Kadtoka** | Arts | 93 | 86 | **92.47** |
| *83.98* | **J.V.Comp. Jr. College, Shirali** | Com | 48 | 42 | **87.50** |
| | | Arts | 203 | 161 | **79.31** |
| *63.88* | **P.M.Comp. Jr. College, Ankola** | Arts | 86 | 62 | **72.09** |
| *44.44* | **G.C.P.U.College, Ankola** | Arts | 29 | 12 | **41.38** |
| *61.53* | | Com | 38 | 20 | **52.63** |
| *55.85* | | Sci | 120 | 63 | **52.50** |
| *64.70* | **J.V.Comp. Jr. College, Dandeli** | Arts | 47 | 23 | **48.94** |
| | | Com | 60 | 24 | **40.00** |
| *78.35* | **Divekar P.U. College, Karwar** | Com | 95 | 52 | **54.74** |
| *47.14* | | Sci | 53 | 15 | **28.30** |

ದ್ವಿತೀಯ ಪಿ.ಯು. ಪರೀಕ್ಷೆಯಲ್ಲಿ ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಕಡತೋಕಾ ಶೇಕಡಾ 92.47 ರಷ್ಟು ಫಲಿತಾಂಶ ನೀಡಿ (86/93) ಮೊದಲನೆ ಸ್ಥಾನವನ್ನು ಉಳಿಸಿಕೊಂಡಿದೆ. ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು ಶಿರಾಲಿ ವಾಣಿಜ್ಯದಲ್ಲಿ ಶೇಕಡಾ 87.50 ರಷ್ಟು ಹಾಗೂ ಕಲೆಯಲ್ಲಿ ಶೇಕಡಾ 79.31 ರಷ್ಟು ಫಲಿತಾಂಶ ನೀಡಿ (203/251) ದ್ವಿತೀಯ ಸ್ಥಾನದಲ್ಲಿದ್ದರೆ, ಪಿ.ಎಂ.ಸಂಯುಕ್ತ ಪದವಿ ಪೂರ್ವ ಕಾಲೇಜ, ಅಂಕೋಲಾ ಶೇಕಡಾ 72.09 ರಷ್ಟು ಫಲಿತಾಂಶ ನೀಡಿ 3ನೇ ಸ್ಥಾನದಲ್ಲಿದೆ. ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು ದಾಂಡೇಲಿ ಕಲಾ ವಿಭಾಗದಲ್ಲಿ

ಶೇಕಡಾ 48.94ರಷ್ಟು ಹಾಗೂ ವಾಣಿಜ್ಯ ವಿಭಾಗದಲ್ಲಿ ಶೇಕಡಾ 40.00 ರಷ್ಟು ಫಲಿತಾಂಶ ನೀಡಿದೆ. ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ, ಅಂಕೋಲಾ ಕಲಾ ವಿಭಾಗದಲ್ಲಿ ಶೇಕಡಾ 41.38, ವಾಣಿಜ್ಯ ವಿಭಾಗದಲ್ಲಿ ಶೇಕಡಾ 52.63, ವಿಜ್ಞಾನ ವಿಭಾಗದಲ್ಲಿ ಶೇಕಡಾ 52.50 ರಷ್ಟು ಫಲಿತಾಂಶ ನೀಡಿದೆ. ದಿವೇಕರ ವಾಣಿಜ್ಯ ಕಾಲೇಜು, ಕಾರವಾರ ವಾಣಿಜ್ಯ ವಿಭಾಗದಲ್ಲಿ ಶೇಕಡಾ 54.74 ಹಾಗೂ ವಿಜ್ಞಾನ ವಿಭಾಗದಲ್ಲಿ ಶೇಕಡಾ 28.30 ರಷ್ಟು ಫಲಿತಾಂಶ ನೀಡಿದೆ.




ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು, ಕಡತೋಕಾ, ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಶಿರಾಲಿ ಹಾಗೂ ಪಿ.ಎಂ.ಸಂಯುಕ್ತ ಪದವಿ ಪೂರ್ವ ಕಾಲೇಜು, ಅಂಕೋಲಾ ಉತ್ತಮ ಫಲಿತಾಂಶ ನೀಡಿದೆ. ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಿಗೆ ಹಾಗೂ ಉಪನ್ಯಾಸಕರಿಗೆ ಧನ್ಯವಾದವನ್ನು ಸಲ್ಲಿಸುತ್ತೇನೆ. ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜು, ದಾಂಡೇಲಿ, ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ, ಅಂಕೋಲಾ ಹಾಗೂ ದಿವೇಕರ ಪದವಿ ಪೂರ್ವ ಕಾಲೇಜು, ಕಾರವಾರ ಈ ಸಂಸ್ಥೆಗಳ ಫಲಿತಾಂಶ ಸಮಾಧಾನಕಾರಕವಾಗಿಲ್ಲ. ಈ ಕಾಲೇಜಿನ ಫಲಿತಾಂಶ

ಜಿಲ್ಲಾ ಮಟ್ಟಕ್ಕಿಂತ ಕಡಿಮೆ ಹಾಗೂ ಕೆಲವು ವಿಭಾಗದಲ್ಲಿ ರಾಜ್ಯಮಟ್ಟಕ್ಕಿಂತ ಕಡಿಮೆಯಾಗಿರುವದು ನೋವಿನ ಸಂಗತಿಯಾಗಿದೆ. ಬರುವ ವರ್ಷ ವಿಶೇಷ ಪ್ರಯತ್ನ ಮಾಡಿ ಫಲಿತಾಂಶ ಹೆಚ್ಚಾಗುವ ದಿಕ್ಕಿನಲ್ಲಿ ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಿ ಕಾರ್ಯ ನಿರ್ವಹಿಸಬೇಕಾಗಿದೆ. ಈ ಕುರಿತು ಪ್ರಾಚಾರ್ಯರು ಹೆಚ್ಚು ಗಮನ ಹರಿಸಬೇಕು. ವಿಷಯ ಬೋಧನೆ ಮಾಡುವ ಉಪನ್ಯಾಸಕರು ತಮ್ಮ ತಮ್ಮ ವಿಷಯದಲ್ಲಿ ಫಲಿತಾಂಶ ಹೆಚ್ಚಾಗುವ ದಿಕ್ಕಿನಲ್ಲಿ ವಿಶೇಷ ಕಾಳಜಿ ವಹಿಸಿ ಬೋಧನೆ ಮಾಡಬೇಕು. ಫಲಿತಾಂಶ ಕಡಿಮೆಯಾಗುವದರಿಂದ ವಿದ್ಯಾರ್ಥಿಗಳ ಪ್ರವೇಶ ಸಂಖ್ಯೆಯೂ ಕೂಡಾ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವದನ್ನು ಸಂಸ್ಥೆಯವರು ಗಮನಿಸಬೇಕು. ಒಳ್ಳೆ ಗುಣಮಟ್ಟದ ಶಿಕ್ಷಣ ನೀಡಿ ಉತ್ತಮ ಫಲಿತಾಂಶ ನೀಡುವದು ಸಂಸ್ಥೆಯ ಎಲ್ಲರ ಕರ್ತವ್ಯವಾಗಿದೆ.

ನಮ್ಮ ಟ್ರಸ್ಟು ನಡೆಸುತ್ತಿರುವ ದಾಂಡೇಲಿಯ ಬಿ.ಎಡ್. ಕಾಲೇಜಿನ ಫಲಿತಾಂಶ ಕೂಡಾ ಶೇಕಡಾ 98.65 ರಷ್ಟು ಆಗಿರುವದು ಸಂತೋಷದ ಸಂಗತಿ. ಪರೀಕ್ಷೆಗೆ ಕುಳಿತ 74 ವಿದ್ಯಾರ್ಥಿಗಳಲ್ಲಿ 73 ವಿದ್ಯಾರ್ಥಿಗಳು ಪಾಸಾಗಿದ್ದಾರೆ. ಅವರಲ್ಲಿ 20 Distinction, 40 First Class, 12 Second Class ಹಾಗೂ 1 Pass Class ಬಂದಿರುತ್ತಾರೆ. ಬರುವ ವರ್ಷ 100ಕ್ಕೆ 100 ರಷ್ಟು ಫಲಿತಾಂಶ ನೀಡಲು ಪ್ರಯತ್ನಿಸಬೇಕು. ಈ ಕಾಲೇಜಿನ ಪ್ರಾಚಾರ್ಯರಿಗೂ, ಉಪನ್ಯಾಸಕರಿಗೂ ವಿದ್ಯಾರ್ಥಿಗಳಿಗೂ ಅಭಿನಂದನೆಗಳು.

ಎಲ್ಲ ಶಿಕ್ಷಣ ಸಂಸ್ಥೆಗಳ ಶೈಕ್ಷಣಿಕ ಪ್ರಗತಿ, ಅಭಿವೃದ್ಧಿ ಕೆಲಸ ಹಾಗೂ ಎಸ್.ಎಸ್.ಎಲ್.ಸಿ./ಪಿ.ಯು.ಸಿ. ಪರೀಕ್ಷಾ ಪರಿಣಾಮವನ್ನು ಚರ್ಚೆಯ ಕಾಲದಲ್ಲಿ ಅಧ್ಯಕ್ಷರು ವಿವರವಾಗಿ ತೆಗೆದುಕೊಳ್ಳಲಿದ್ದಾರೆ.

## 4. ಶೈಕ್ಷಣಿಕ ವರ್ಷದಲ್ಲಿ ವಿಶೇಷ ಸಾಧನೆ ಮಾಡಿದ ಶಿಕ್ಷಕರ, ನಿವೃತ್ತಿ ಹೊಂದಿದವರ ಹಾಗೂ ಬಡ್ತಿ ಪಡೆದವರ ಮಾಹಿತಿ

1. ಜನತಾ ವಿದ್ಯಾಲಯ ಕಾಸರಕೋಡ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ಎ.ಎಂ.ಮುಲ್ಲಾರವರಿಗೆ ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆಯವರು ನೀಡುವ 2010–11ನೇ ಸಾಲಿನ ಶಿಕ್ಷಕರ ರಾಷ್ಟ್ರ ಪ್ರಶಸ್ತಿ ಲಭಿಸಿದೆ. ಸಪ್ಟಂಬರ 5, 2011ರ ಶಿಕ್ಷಕರ ದಿನಾಚರಣೆಯ ದಿನದಂದು ದೆಹಲಿಯ ವಿಜ್ಞಾನ ಭವನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಭಾರತದ ರಾಷ್ಟ್ರಪತಿಯವರಿಂದ ಈ ಪ್ರಶಸ್ತಿಯನ್ನು ಶ್ರೀ ಎ.ಎಂ.ಮುಲ್ಲಾರವರು ಪಡೆಯಲಿದ್ದಾರೆ. ಶಿಕ್ಷಕ ವೃತ್ತಿಯಲ್ಲಿ ಸೇವೆ ಸಲ್ಲಿಸಿ ರಾಷ್ಟ್ರ ಪ್ರಶಸ್ತಿಗೆ ಅರ್ಹರಾದದ್ದು ಟ್ರಸ್ಟಿಗೆ ಹಾಗೂ ಉತ್ತರ ಕನ್ನಡ ಜಿಲ್ಲೆಗೆ ಹಾಗೂ ರಾಜ್ಯಕ್ಕೆ ಸಂದ ಗೌರವವಾಗಿದೆ ಹಾಗೂ ಹೆಮ್ಮೆಯ ವಿಷಯವಾಗಿದೆ. ಈ ಒಂದು ಅತ್ಯುನ್ನತ ಗೌರವಕ್ಕೆ ಪಾತ್ರರಾದ

ಶ್ರೀ ಎ.ಎಂ.ಮುಲ್ಲಾರವರನ್ನು ಕೆನರಾ ವೆಲ್‌ಫೇರ್ ಟ್ರಸ್ಟಿನ ಪರವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಹೃತ್ಪೂರ್ವಕವಾಗಿ ಅಭಿನಂದಿಸಿ ಅವರಿಗೆ ಶುಭವನ್ನು ಕೋರುತ್ತೇನೆ.

2. ಗೋಖಲೆ ಸೆಂಟಿನರಿ ಪದವಿ ಕಾಲೇಜ್, ಅಂಕೋಲಾದಲ್ಲಿ ರಸಾಯನ ಶಾಸ್ತ್ರ ವಿಭಾಗದಲ್ಲಿ Associate Professor ರಾಗಿ ಕಾರ್ಯ ನಿರ್ವಹಿಸುತ್ತಿರುವ ಡಾ.ಇಮ್ತಿಯಾಜ ಅಹಮ್ಮದ ಖಾನ್ ಅವರು ಯುನಿವರ್ಸಿಟಿ ಆಫ್ ಸಾಯನ್ಸ, ಮಲೇಶಿಯಾದಲ್ಲಿ Post Doctorate Research Fellowship ಪದವಿ ಸಂಪಾದಿಸಿದ್ದಾರೆ. ಅವರು ಬರೆದ 40ಕ್ಕೂ ಮಿಕ್ಕಿ ಸಂಶೋಧನಾ ಲೇಖನವು International Magazine ದಲ್ಲಿ ಪ್ರಕಟಣೆಗೊಂಡಿದೆ. ಇದೊಂದು ಉತ್ತಮ ದಾಖಲೆಯ ಸಾಧನೆಯಾಗಿದೆ. ಅವರಿಗೂ ಟ್ರಸ್ಟಿನ ಪರವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಹಾರ್ದಿಕವಾಗಿ ಅಭಿನಂದಿಸಿ ಶುಭವನ್ನು ಕೋರುತ್ತೇನೆ.

3. ಜನತಾ ವಿದ್ಯಾಲಯ ಪ್ರೌಢಶಾಲೆ, ಬಾಡ–ಕಾಗಾಲದಲ್ಲಿ ಮುಖ್ಯಾಧ್ಯಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದ ಶ್ರೀ ಎಮ್.ಎಚ್.ನಾಯ್ಕ ಅವರು 30–03–2011 ರಂದು ಸೇವಾ ನಿವೃತ್ತಿ ಹೊಂದಿರುತ್ತಾರೆ. ಅವರು ಟ್ರಸ್ಟಿನ ವಿವಿಧ ಸಂಸ್ಥೆಗಳಲ್ಲಿ ದೀರ್ಘಕಾಲ ಉಪಯುಕ್ತ ಸೇವೆ ಸಲ್ಲಿಸಿದ್ದಾರೆ. ಅವರ ನಿವೃತ್ತಿ ಜೀವನ ಶುಭದಾಯಕವಾಗಲೆಂದು ಟ್ರಸ್ಟಿನ ಹಾಗೂ ತಮ್ಮೆಲ್ಲರ ಪರವಾಗಿ ಹಾರೈಸುತ್ತೇನೆ. ಅವರ ಜಾಗೆಯಲ್ಲಿ ಸರ್ಕಾರದ ನಿಯಮದಂತೆ ಸೇವಾ ಜೇಷ್ಠತೆಯಲ್ಲಿ ಹಿರಿಯರಾದ ಶ್ರೀ ಎಸ್.ಎನ್.ನಾಯಕ, ಸಹಶಿಕ್ಷಕರು, ಎಸ್.ಕೆ.ಪಿ.ಹೈಸ್ಕೂಲ, ಕತಗಾಲ ಇವರನ್ನು ಮುಖ್ಯಾಧ್ಯಾಪಕರಾಗಿ ಭಡ್ತಿ ನೀಡಲು ಆಡಳಿತ ಮಂಡಳಿ ನಿರ್ಣಯಿಸಿದ ಪ್ರಕಾರ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅವರ ನೇಮಕಾತಿ ಅನುಮೋದನೆ ಸದ್ಯದಲ್ಲಿ ಬರಲಿದೆ. ಅವರಿಗೂ ಶುಭ ಹಾರೈಸುತ್ತೇನೆ.

4. ದಿವೇಕರ ವಾಣಿಜ್ಯ ಪದವಿ ಮಹಾವಿದ್ಯಾಲಯದಲ್ಲಿ ಪ್ರೊ. ವಾಯ್.ಬಿ.ಬಂಡಿ ಇವರು ವಾಣಿಜ್ಯ ವಿಭಾಗದಲ್ಲಿ Associate Professor ರಾಗಿ 35 ವರ್ಷಕಾಲ ಉಪಯುಕ್ತ ಸೇವೆ ಸಲ್ಲಿಸಿ ದಿನಾಂಕ 31–08–2010 ರಂದು ಸೇವಾ ನಿವೃತ್ತಿ ಹೊಂದಿದ್ದಾರೆ. ಅವರಿಗೆ ಟ್ರಸ್ಟಿನ ಪರವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಅಭಿನಂದಿಸಿ ಅವರ ನಿವೃತ್ತಿ ಜೀವನ ಶುಭದಾಯಕವಾಗಲಿ ಎಂದು ಹಾರೈಸುತ್ತೇನೆ.

5. ಪಿ.ಎಂ.ಹೈಸ್ಕೂಲಿನಲ್ಲಿ ಸಹಶಿಕ್ಷಕರಾಗಿ 25 ವರ್ಷಗಳ ಕಾಲ ಸೇವೆ ಸಲ್ಲಿಸಿದ ಶ್ರೀ ಎಸ್.ವಿ.ಮುಳಗುಂದ ಅವರು ದಿನಾಂಕ 31–05–2011 ರಂದು ಸೇವಾ ನಿವೃತ್ತಿ ಹೊಂದಿರುತ್ತಾರೆ. ಅವರಿಗೂ ಟ್ರಸ್ಟಿನ ಪರವಾಗಿ ಹಾಗೂ ತಮ್ಮೆಲ್ಲರ ಪರವಾಗಿ ಅಭಿನಂದಿಸಿ ಅವರ ನಿವೃತ್ತಿ ಜೀವನ ಶುಭದಾಯಕವಾಗಲೆಂದು ಹಾರೈಸುತ್ತೇನೆ.

6. ಪ್ರೊ. ಶ್ರೀಮತಿ ಆಸ್ತಿಕ ಹೆಗಡೆ ಇವರು ಟ್ರಸ್ಟು ನಡೆಸುತ್ತಿರುವ ಬಿ.ಇಡ್.ಕಾಲೇಜ್ ದಾಂಡೇಲಿಯಲ್ಲಿ ವಿಜ್ಞಾನ ವಿಭಾಗದಲ್ಲಿ ಉಪನ್ಯಾಸಕರಾಗಿ ಉಪಯುಕ್ತ ಸೇವೆ ಸಲ್ಲಿಸಿ ದಿನಾಂಕ 30–05–2011 ರಂದು ಸೇವೆಗೆ ರಾಜಿನಾಮೆ ನೀಡಿ ಹೆಚ್ಚಿನ ಅಭ್ಯಾಸಕ್ಕಾಗಿ ಬೆಂಗಳೂರಿಗೆ ಹೋಗಿರುತ್ತಾರೆ. ಅವರಿಗೂ ಅಭಿನಂದನೆ ಸಲ್ಲಿಸಿ ಶುಭವನ್ನು ಕೋರುತ್ತೇನೆ.

## 5. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಯಲ್ಲಿ ವಿದ್ಯಾರ್ಥಿಗಳ ಸಾಧನೆ

2010–11ನೇ ಶೈಕ್ಷಣಿಕ ವರ್ಷದಲ್ಲಿ ಕೆಲವು ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಅವರ ವಿವರ ಈ ಕೆಳಗಿನಂತಿದೆ.

1. **ಗೋಖಲೆ ಸೆಂಟಿನರಿ ಪದವಿ ಕಾಲೇಜ, ಅಂಕೋಲಾ –**

   ಕು.ಹೇಮಾ ನಾಯಕ ಇವರು ಬಿ.ಎಸ್ಸಿ ಭಾಗ–1 ಗಣಿತದಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮ ಹಾಗೂ ಡಿ.ಸಿ.ಪಾವಟೆ ಸ್ಕಾಲರಶಿಫ್ ಪಡೆದಿರುವರು.

2. **ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ, ಅಂಕೋಲಾ–**

   ಕು.ಭಾವನಾ ಗಾಂವಕರ ಇವರು ಏಕಪಾತ್ರಾಭಿನಯದಲ್ಲಿ, ಪ್ರಣೇಶ ಪಿ.ಕಲ್ಮನೆ ಇವರು ಚಿತ್ರಕಲಾ ಸ್ಪರ್ಧೆಯಲ್ಲಿ ವಲಯ ಮಟ್ಟದಲ್ಲಿ ಪ್ರಥಮ ಸ್ಥಾನ ಗಳಿಸಿ ರಾಜ್ಯಮಟ್ಟದಲ್ಲಿ ಭಾಗವಹಿಸಿದ್ದಾರೆ. ಜಯಸೂರ್ಯ ಎಸ್.ನಾಯಕ ಇವರು ದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವದ ಎನ್.ಸಿ.ಸಿ. ಪಥಸಂಚಲನದಲ್ಲಿ ಭಾಗವಹಿಸಿದ್ದಾರೆ.

3. **ದಿವೇಕರ ವಾಣಿಜ್ಯ ಪದವಿ ಕಾಲೇಜ, ಕಾರವಾರ**

   ಪ್ರಶಾಂತ ಎಂ.ಹರಿಕಾಂತ ಇವರು 85 ಕೆಜಿ. ಭಾರ ಎತ್ತುವ ಸ್ಪರ್ಧೆಯಲ್ಲಿ ಬಂಗಾರದ ಪದಕ, ಅಮಯ ನಾಯ್ಕ ಇವರು ಬೆಳ್ಳಿಯ ಪದಕ ಸಂಪಾದಿಸಿದ್ದಾರೆ. ಇಮ್ರಾನ್ ಶೇಖ ಇವರು ಉದ್ದಜಿಗಿತದಲ್ಲಿ ಬಂಗಾರದ ಪದಕ, ಟ್ರಿಪಲ್ ಜಂಪನಲ್ಲಿ ಬೆಳ್ಳಿಪದಕ ಸಂಪಾದಿಸಿದ್ದಾರೆ. ಸುನಿಲ ಪಿ.ನಾಯ್ಕ ಟೇಬಲ್ ಟೆನ್ನಿಸನಲ್ಲಿ ಯುನಿವರ್ಸಿಟಿ ಬ್ಲೂ ಆಗಿರುವರು.

4. **ದಿವೇಕರ ಪದವಿ ಪೂರ್ವ ಕಾಲೇಜ, ಕಾರವಾರ**

   ಪ್ರಶಾಂತ ಎಸ್.ಕೆ.ಇವರು ಶಟ್ಲ ಬ್ಯಾಡ್ಮಿಂಟನ್ನಲ್ಲಿ ರಾಜ್ಯ ಮಟ್ಟದಲ್ಲಿ ಭಾಗವಹಿಸಿರುವರು.

5. **ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ದಾಂಡೇಲಿ**

   ಕು.ಪೂಜಾ ಪಾಲೇಕರ ಮತ್ತು ಮಂಜುಳಾ ಕೇಸರೇಕರ ಇವರು ರಾಜ್ಯ ಮಟ್ಟದ ಕನ್ನಡ ಪ್ರಾಧಿಕಾರದ ಬಹುಮಾನ ಗಳಿಸಿದ್ದಾರೆ. ಅಕ್ಷತಾ ಪರಶುರಾಮ ಹೆಬ್ಬಳ್ಳಿ ಇವರು ರಂಗೋಲಿ ಸ್ಪರ್ಧೆಯಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು, ಹರೀಶ ಹೆಗಡೆ, ಕಿರಣ ರಾಠೋಡ, ಬಾಲಚಂದ್ರ ಲಮಾಣಿ ಇವರು ವಾಲಿಬಾಲ ಪಂದ್ಯಾವಳಿಯಲ್ಲಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ನವಲಕಿಶೋರ ಕಲಂತ್ರಿ, ಯೋಗಿತ ಓಂಪ್ರಕಾಶ ಗೌರ, ಸಿದ್ದಾರ್ಥ ವಾಸುದೇವ ಘಾಡಿ ಇವರು ಟಿ.ಟಿ.ಪಂದ್ಯಾವಳಿಯಲ್ಲಿ ರಾಜ್ಯ ಮಟ್ಟದಲ್ಲಿ ಭಾಗವಹಿಸಿದ್ದಾರೆ.,

6. **ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಶಿರಾಲಿ**

ಪೋಲ್ ವಾಲ್ಟನಲ್ಲಿ ಹರೀಶ ವೆಂಕಟ್ರಮಣ ನಾಯ್ಕ ಇವರು ರಾಜ್ಯಕ್ಕೆ ದ್ವಿತೀಯ ಸ್ಥಾನ ಹಾಗೂ ಗಣಪತಿ ನಾಯ್ಕ ಇವರು 4ನೇ ಸ್ಥಾನ ಗಳಿಸಿದ್ದಾರೆ.

7. **ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಕಡತೋಕಾ**

ಸ್ಕೌಟ ವಿಭಾಗದಲ್ಲಿ 6 ವಿದ್ಯಾರ್ಥಿಗಳು ರಾಜ್ಯಮಟ್ಟದಲ್ಲಿ ಪುರಸ್ಕಾರ ಪಡೆದಿದ್ದಾರೆ.

8. **ಪಿ.ಎಂ.ಹೈಸ್ಕೂಲ, ಅಂಕೋಲಾ**

ದರ್ಶನ ನಾರಾಯಣ ಗೌಡ 200 ಮೀ. ಓಟದಲ್ಲಿ ಹಾಗೂ ಬಿಂದು ಆರ್. ನಾಯ್ಕ ಇವರು ಅಣಕು ಸಂಸತ್ತಿನ ಸ್ಪರ್ಧೆಯಲ್ಲಿ ರಾಜ್ಯಮಟ್ಟದಲ್ಲಿ ಭಾಗವಹಿಸಿದ್ದಾರೆ. ಎನ್.ಸಿ.ಸಿ. ವಾರ್ಷಿಕ ತರಬೇತಿ ಶಿಬಿರದಲ್ಲಿ ಜಿಲ್ಲಾ ಮಟ್ಟದಲ್ಲಿ ಚಾಂಪಿಯನ್. ಕಾರ್ತಿಕೇಯ ಎಸ್.ನಾಯಕ ಜಿಲ್ಲಾ ಮಟ್ಟದಲ್ಲಿ ಬೆಸ್ಟ್ ಕೆಡೆಟ್ ಪ್ರಶಸ್ತಿ ಪಡೆದಿರುತ್ತಾರೆ.

9. **ಜನತಾ ವಿದ್ಯಾಲಯ ಬಾಡ–ಕಾಗಾಲ**

ಶರತ ಎಂ.ನಾಯ್ಕ ಮತ್ತು ಸಂದೇಶ ವಿ.ನಾಯ್ಕ ಇವರು ರಾಜ್ಯ ಮಟ್ಟದ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

10. **ಜನತಾ ವಿದ್ಯಾಲಯ, ಕಾಸರಕೋಡ**

ಶ್ರೀ ಸಂದೀಪ ಎಚ್.ಗೌಡ, ರಮೇಶ ಟಿ.ಗೌಡ ಇವರು ಯೋಗದಲ್ಲಿ ವಿಭಾಗ ಮಟ್ಟದಲ್ಲಿ ದ್ವಿತೀಯ ಸ್ಥಾನ ಹಾಗೂ ಫಿಲೀಪ ಫರ್ನಾಂಡಿಸ್ ಮತ್ತು ಸಂತೋಷ ನಿಲೇಕಣಿ ಇವರು ರಾಜ್ಯ ಮಟ್ಟದಲ್ಲಿ ಭಾಗವಹಿಸಿದ್ದಾರೆ.

11. **ಜನತಾ ವಿದ್ಯಾಲಯ ಮುರ್ಡೇಶ್ವರ**

ಶ್ರೀ ರೋಶನ್ ಡಿ'ಸೋಜಾ ಇವರು 100 ಮೀ. ಓಟದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

12. **ಜನತಾ ವಿದ್ಯಾಲಯ, ಮುದಗಾ**

ದಿಕ್ಷೀತಾ ತಾಂಡೇಲ, ಅನುಷಾ ದುರ್ಗೇಕರ ಇವರು ವಿಜ್ಞಾನ ಮೇಳದಲ್ಲಿ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಗಳಿಸಿದ್ದಾರೆ.

13. **ಜನತಾ ವಿದ್ಯಾಲಯ, ಬೇಡಕಣಿ**

ಹರ್ಷ ವಿ.ಚಂದಾವರಕರ ಗುಂಡು ಎಸೆತದಲ್ಲಿ ರಾಜ್ಯಕ್ಕೆ ಪ್ರಥಮ ರಾಷ್ಟ್ರಮಟ್ಟದಲ್ಲಿ ತೃತೀಯ ಸ್ಥಾನ ಗಳಿಸಿದ್ದಾರೆ.

14. <u>ಜನತಾ ವಿದ್ಯಾಲಯ, ಕುಳವೆ–ಬರೂರ</u>

ಶ್ವೇತಾ ನಾಯ್ಕ, ರೇಷ್ಮಾ ನಾಯ್ಕ, ನರೇಂದ್ರ ನಾಯ್ಕ ಇವರು ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

15. <u>ಎಸ್.ಕೆ.ಪಿ.ಹೈಸ್ಕೂಲ, ಕತಗಾಲ</u>

ನೇತ್ರಾವತಿ ಜೆ.ಗೌಡ 3000 ಮಿ. ಓಟದಲ್ಲಿ ರಾಜ್ಯಮಟ್ಟದಲ್ಲಿ ಪ್ರತಿನಿದಿಸಿದ್ದಾರೆ. ಅಶೋಕ ಭಟ್ಟ ರಾಜ್ಯಮಟ್ಟದಲ್ಲಿ ಭಾಗವಹಿಸಿದ್ದಾರೆ.

ಜನತಾ ವಿದ್ಯಾಲಯ ಕಡವಾಡ, ಮಿರ್ಜಾನ, ಧಾರೇಶ್ವರ ಮತ್ತು ಅನಿಲಗೋಡ ಶಾಲೆಯ ವಿದ್ಯಾರ್ಥಿಗಳು ಮಾತ್ರ ರಾಜ್ಯಮಟ್ಟದ ಕ್ರೀಡೆಯಲ್ಲಿ ಭಾಗವಹಿಸಿರುವದಿಲ್ಲ. ಈ ಶಾಲೆಗಳ ದೈಹಿಕ ಶಿಕ್ಷಣ ಬೋಧಕರು ಮಕ್ಕಳಿಗೆ ವಿಶೇಷ ತರಬೇತಿ ನೀಡಿ ಅವರಲ್ಲಿ ಕೆಲವರಾದರೂ ರಾಜ್ಯಮಟ್ಟದಲ್ಲಿ ಪ್ರತಿನಿಧಿಸುವಂತೆ ಪ್ರಯತ್ನ ಮಾಡಬೇಕು.

## 6. ಅನುಮೋದಿತ ಹುದ್ದೆಗಳಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಹಾಗೂ ಖಾಲಿ ಇರುವ ಹುದ್ದೆಗಳ ಕುರಿತು

2010–2011ನೇ ಸಾಲಿನಲ್ಲಿ ಖಾಲಿ ಇರುವ ಅನುಮೋದಿತ ಹುದ್ದೆಗಳ ನೇಮಕಾತಿಗೆ ಶಿಕ್ಷಣ ಇಲಾಖೆಯಿಂದ ಅನುಮೋದನೆ ಪಡೆದು 11 ಶಿಕ್ಷಕರ ನೇಮಕಾತಿಯನ್ನು ವಿವಿಧ ಶಾಲೆಗಳಲ್ಲಿ ಮಾಡಲಾಗಿದೆ. ಅವರೆಲ್ಲರೂ ಮೇ 30 ರಂದು ಸೇವೆಗೆ ಹಾಜರಾಗಿದ್ದಾರೆ. ಸರಕಾರದ ಈ ಹಿಂದಿನ ಆದೇಶದಂತೆ ಡಿಸೆಂಬರ 2008ರ ವರೆಗೆ ಖಾಲಿ ಇರುವ ಒಟ್ಟೂ 9 ಶಿಕ್ಷಕರ ಹುದ್ದೆಗಳ ನೇಮಕಾತಿ ಪ್ರಸ್ತಾವನೆ ಆಯುಕ್ತರಿಗೆ ಸಲ್ಲಿಸಲಾಗಿದೆ. ನೇಮಕಾತಿ ಮಾಡಲು ಆಯುಕ್ತರು ಅನುಮೋದನೆ ಆದೇಶ ಜುಲೈ ತಿಂಗಳ ಕೊನೆಯೊಳಗೆ ಬರಬಹುದೆಂದು ನಿರೀಕ್ಷಿಸಲಾಗಿದೆ.

ಪಿ.ಎಂ.ಪದವಿ ಪೂರ್ವ ಕಾಲೇಜು ಸ್ಥಾಪನೆಯಾಗಿ ಇಂದಿಗೆ 17 ವರ್ಷಗಳಾಗಿವೆ. ಸರ್ಕಾರದ ನಿಯಮದಂತೆ ಅನುದಾನ ರಹಿತವಾಗಿ 1993–94ನೇ ಸಾಲಿನಲ್ಲಿ ಪ್ರಾರಂಭಿಸಿದ ಸಂಸ್ಥೆ. ಸರಕಾರದ ಅನುದಾನ ನೀತಿಗೆ ಈ ಕಾಲೇಜು ಒಳಪಟ್ಟು ಎರಡು ವರ್ಷ ಕಳೆದರೂ ಕೂಡಾ ಇದುವರೆಗೆ ಸರ್ಕಾರ ಅನುದಾನಕ್ಕೆ ಒಳಪಡಿಸದೇ ಇರುವದರಿಂದ ಸಂಸ್ಥೆ ನಡೆಸುವದು ಆರ್ಥಿಕವಾಗಿ ಬಹಳ ಕಷ್ಟದಾಯಕವಾಗಿದೆ. ಅನುದಾನಕ್ಕೆ ಒಳಪಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದ್ದು, ಸರ್ಕಾರದ ಆದೇಶಕ್ಕಾಗಿ ಪ್ರಯತ್ನ ಮುಂದುವರೆದಿದೆ. ಸರ್ಕಾರ ಸದ್ಯದಲ್ಲಿ ಅನುಮೋದನೆ ಆದೇಶ ನೀಡಬಹುದೆಂದು ಆಶಿಸಿದ್ದೇವೆ.

ಕರ್ನಾಟಕ ಸರಕಾರದವರು 2001ರಲ್ಲಿ ಪಿ.ಯು.ಸಿ.ವಿಭಾಗವನ್ನು ಪದವಿ ವಿಭಾಗದಿಂದ ಪ್ರತ್ಯೇಕಗೊಳಿಸಿ ಆದೇಶ ಹೊರಡಿಸಿದ್ದರು. ಆ ಪ್ರಕಾರ ದಿವೇಕರ ಪದವಿ ಪೂರ್ವ ಕಾಲೇಜು ಹಾಗೂ ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜನ್ನು ಪದವಿ ಕಾಲೇಜಿನಿಂದ ಪ್ರತ್ಯೇಕಿಸಲಾಗಿತ್ತು. ಈ ಕಾಲೇಜುಗಳಿಗೆ ಸರ್ಕಾರ ಇದುವರೆಗೆ ಉಪನ್ಯಾಸಕರನ್ನು ನೇಮಿಸಿಕೊಳ್ಳಲು ಅನುಮತಿ ನೀಡಿರುವದಿಲ್ಲ. ಈ ಕಾಲೇಜುಗಳಿಗೆ ಬೇಕಾಗುವ ಅಧ್ಯಾಪಕರನ್ನು 2001 ರಿಂದ ಅಂದರೆ ಕಳೆದ 10 ವರ್ಷಗಳಿಂದ ಆಡಳಿತ ಮಂಡಳಿಯವರೇ ತಾತ್ಕಾಲಿಕವಾಗಿ ಉಪನ್ಯಾಸಕರನ್ನು ನೇಮಿಸಿಕೊಂಡು ಇದುವರೆಗೆ ಅವರ ವೇತನ ನೀಡುತ್ತ ಬಂದಿದೆ. ಈ ಕಾಲೇಜುಗಳಿಗೆ 2010–11ನೇ ಸಾಲಿನಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡ ಸಿಬ್ಬಂದಿಗಳಿಗೆ ವೇತನ ನೀಡುತ್ತಿರುವದು ಆಡಳಿತ ಮಂಡಳಿಗೆ ಅತಿ ದೊಡ್ಡ ಸಮಸ್ಯೆಯಾಗಿದೆ. ಕಳೆದ ವರ್ಷ ಜಿ.ಸಿ.ಪದವಿ ಪೂರ್ವ ಕಾಲೇಜ್, ದಿವೇಕರ ಪದವಿ ಪೂರ್ವ ಕಾಲೇಜ ಹಾಗೂ ಪಿ.ಎಂ.ಪದವಿ ಪೂರ್ವ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ನೀಡಿದ ಒಟ್ಟು ವೇತನ ರೂ. 17,81,925/–. ಕರ್ನಾಟಕ ಸರ್ಕಾರ ಹುದ್ದೆಗಳನ್ನು ತುಂಬಲು ಅನುಮತಿ ನೀಡುವದಾಗಿ ಹೇಳುತ್ತಿದ್ದರು ಇದುವರೆಗೆ ನೀಡದಿರುವದು ತುಂಬಾ ತೊಂದರೆಗೆ ಈಡು ಮಾಡಿದೆ.

ಗೋಖಲೆ ಸೆಂಟಿನರಿ ಪದವಿ ಪೂರ್ವ ಕಾಲೇಜ ಹಾಗೂ ದಿವೇಕರ ಪದವಿ ಪೂರ್ವ ಕಾಲೇಜಿನಲ್ಲಿ ಖಾಲಿ ಇರುವ ಒಟ್ಟು 12 ಉಪನ್ಯಾಸಕರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಇಲಾಖೆಗೆ ಸಲ್ಲಿಸಲಾಗಿದ್ದು ಅದರಲ್ಲಿ 9 ಹುದ್ದೆಗಳಿಗೆ ಅನುಮೋದನೆ ದೊರೆತು 2 ವರ್ಷಗಳಾದರೂ ಸರ್ಕಾರ ಇದುವರೆಗೆ ನೇಮಕಾತಿಗೆ ಅನುಮತಿ ನೀಡಿರುವದಿಲ್ಲ. ಸರ್ಕಾರ ಈ ಹುದ್ದೆಗಳಿಗೆ ಆದಷ್ಟು ಬೇಗನೆ ನೇಮಕಾತಿ ಮಾಡಲು ಅನುಮತಿ ನೀಡಿದರೆ ಆಡಳಿತ ಮಂಡಳಿಯ ಆರ್ಥಿಕ ಹೊರೆ ಸ್ವಲ್ಪ ಮಟ್ಟಿಗೆ ಕಡಿಮೆಯಾಗಬಹುದೆಂದು ಆಶಿಸಲಾಗದೆ. ಸರ್ಕಾರಿಂದ ಅನುಮತಿ ಪಡೆಯಲು ಪ್ರಯತ್ನ ಮುಂದುವರೆದಿದೆ. ಸರ್ಕಾರ ಕೂಡಲೆ ಹುದ್ದೆಗಳ ನೇಮಕಾತಿಗೆ ಅನುಮೋದನೆ ನೀಡಬೇಕೆಂದು ಈ ಮೂಲಕ ವಿನಂತಿಸುತ್ತೇನೆ.

## 7. ಟ್ರಸ್ಟು ಪ್ರಕಟಿಸಿದ ಪುಸ್ತಕ

1. ಡಾ.ದಿನಕರ ದೇಸಾಯಿಯವರ ಜನ್ಮ ಶತಾಬ್ದಿ ಸವಿನೆನಪಿಗಾಗಿ ಟ್ರಸ್ಟು ಜನವರಿ, 2008ರಲ್ಲಿ ಡಾ. ದಿನಕರ ದೇಸಾಯಿಯವರ ಸಮಗ್ರ ಕಾವ್ಯ ಗ್ರಂಥವನ್ನು ಪ್ರಕಟಿಸಿ ಬಿಡುಗಡೆ ಮಾಡಿತ್ತು. ಈ ಪುಸ್ತಕದ ಪ್ರಕಟಣೆಗೆ ಟ್ರಸ್ಟನಿಂದ ರೂ.89,000/– ಖರ್ಚು ಮಾಡಲಾಗಿತ್ತು. ಈ ಪುಸ್ತಕದ ಮಾರಾಟದಿಂದ ಟ್ರಸ್ಟಿಗೆ ಇದುವರೆಗೆ ರೂ.1,44,616/– ಜಮಾ ಆಗಿರುತ್ತದೆ. ಒಟ್ಟೂ ಮುದ್ರಣ ಮಾಡಿದ 1000 ಪ್ರತಿಗಳಲ್ಲಿ 389 ಪ್ರತಿಗಳು ಶಿಲ್ಕು ಇರುತ್ತದೆ. ಈ ಪ್ರತಿಗಳ ಮಾರಾಟವಾಗಬೇಕಿದೆ.

2. ಈ ಹಿಂದೆ ಟ್ರಸ್ಟು ಪ್ರಕಟಿಸಿದ ಡಾ.ದಿನಕರ ದೇಸಾಯಿಯವರ ಚೌಪದಿ ಪುಸ್ತಕಗಳು ಲಭ್ಯವಿಲ್ಲದ್ದರಿಂದ ಮಾರ್ಚ 2011ರಲ್ಲಿ 'ದಿನಕರ ಚೌಪದಿ' ಪುಸ್ತಕ (ಪರಿಷ್ಕೃತ ಆವೃತ್ತಿ) 1000 ಪ್ರತಿಗಳನ್ನು ಮುದ್ರಿಸಲಾಗಿದೆ. ಈ ಪುಸ್ತಕದ ಪ್ರಕಟಣೆಗೆ ಟ್ರಸ್ಟಿನಿಂದ ರೂ.1,13,426/– ಖರ್ಚು ಮಾಡಲಾಗಿದೆ. ಈ ಪುಸ್ತಕ 562 ಪುಟಗಳನ್ನು ಹೊಂದಿದ್ದು ಮುಖಬೆಲೆ ರೂ.350/– ಇರುತ್ತದೆ. ಈ ಪುಸ್ತಕಗಳು ಈಗ ಮಾರಾಟಕ್ಕೆ ಲಭ್ಯವಾಗಿದೆ.

ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಕಾಲೇಜಿನ/ಪದವಿ ಪೂರ್ವ ಕಾಲೇಜಿನ/ ಹೈಸ್ಕೂಲಿನ ಲೈಬ್ರರಿಯ ಸಲುವಾಗಿ ಈ ಪುಸ್ತಕವನ್ನು ಖರೀದಿಸುವಂತೆ ಈಗಾಗಲೇ ಸುತ್ತೋಲೆಯ ಮೂಲಕ ತಿಳಿಸಲಾಗಿದೆ. ರೂ.350/–ರ ಮುಖಬೆಲೆಯ ಈ ಪುಸ್ತಕವನ್ನು ನಮ್ಮ ಸಂಸ್ಥೆಗಳಿಗೆ ವಿಶೇಷ ರಿಯಾಯತಿ ದರದಲ್ಲಿ ರೂ.250/–ಕ್ಕೆ ಮಾರಾಟ ಮಾಡುವಂತೆ ಟ್ರಸ್ಟಿನ ಅಧ್ಯಕ್ಷರು ಅನುಮತಿ ನೀಡಿರುತ್ತಾರೆ.

ಡಾ.ದಿನಕರ ದೇಸಾಯಿಯವರು ಬರೆದ ಈ ಮೇಲೆ ನಮೂದಿಸಿದ ಎರಡು ಪುಸ್ತಕಗಳು ಉಪಯುಕ್ತವಾಗಿದ್ದು ಅದರ ಪ್ರತಿಗಳನ್ನು ಖರೀದಿಸುವಲ್ಲಿ ಎಲ್ಲರೂ ಸಹಕರಿಸಬೇಕಾಗಿ ವಿನಂತಿಸುತ್ತೇನೆ.

ಈ ಗ್ರಂಥ ಪ್ರಕಟಿಸುವಲ್ಲಿ ಹಾಗೂ ಮಾರಾಟ ಮಾಡುವಲ್ಲಿ ಶ್ರೀ ವಿಷ್ಣು ನಾಯ್ಕರು ತುಂಬಾ ಶ್ರಮಿಸಿದ್ದಾರೆ ಹಾಗೂ ಸಹಕಾರ ನೀಡುತ್ತಿದ್ದಾರೆ. ಅವರಿಗೆ ಟ್ರಸ್ಟಿನ ಪರವಾಗಿ ಅಭಿನಂದಿಸಿ ಕೃತಜ್ಞತೆ ಸಲ್ಲಿಸುತ್ತಿದ್ದೇನೆ.

## 8. ವಿಜ್ಞಾನ ಕಾರ್ಯಗಾರ:

ದಿನಾಂಕ 03–07–2010ರ ಕೆನರಾ ವೆಲ್‌ಫೇರ್ ಟ್ರಸ್ಟಿನ ಸಂಸ್ಥೆಗಳ ಮುಖ್ಯಸ್ಥರ ಸಭೆಯಲ್ಲಿ ನಿರ್ಣಯಿಸಿದಂತೆ, ಕೆನರಾ ವೆಲ್‌ಫೇರ್ ಟ್ರಸ್ಟ, ಅಂಕೋಲಾ (ಉ.ಕ.)ದ ಆಶ್ರಯದಲ್ಲಿ ದಿನಾಂಕ 11–01–2011 ರಂದು ಪಿ.ಎಂ.ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಟ್ರಸ್ಟಿನ ಎಲ್ಲ ಪ್ರೌಢಶಾಲೆಗಳ ವಿಜ್ಞಾನ ಶಿಕ್ಷಕರಿಗಾಗಿ ಒಂದು ದಿನದ ವಿಜ್ಞಾನ ಕಾರ್ಯಗಾರವನ್ನು ನಡೆಸಲಾಯಿತು. ಈ ಕಾರ್ಯಗಾರದಲ್ಲಿ ಭೌತಶಾಸ್ತ್ರದ ಉಪಕರಣಗಳ ಕುರಿತು ಶಿಕ್ಷಕರಿಗೆ ಸಂಪೂರ್ಣ ಮಾಹಿತಿಯನ್ನು ನೀಡಲು, ಧಾರವಾಡದ 'ತರಂಗ ಸೈಂಟಿಫಿಕ ಇನ್ಸಟ್ರುಮೆಂಟ್ಸ'ದ ಸಂಸ್ಥಾಪಕರಾದ ಶ್ರೀ ಸಂಜೀವ ಕುಮಾರ ಡಿ.ಪಾಟೀಲರನ್ನು ವಿಶೇಷವಾಗಿ ಆಮಂತ್ರಿಸಲಾಗಿತ್ತು. ಕಾರ್ಯಗಾರದಲ್ಲಿ ಟ್ರಸ್ಟ ಶಾಲೆಯ 29 ಸ್ಥಳೀಯ ಇತರ ಶಾಲೆಗಳಿಂದ 5 ಶಿಕ್ಷಕರು ಭಾಗವಹಿಸಿದ್ದರು.

- ಶ್ರೀ ಸಂಜೀವ ಕುಮಾರ ಡಿ.ಪಾಟೀಲರವರು ತಾವೇ ತಯಾರಿಸಿದ ಸುಮಾರು 40ಕ್ಕೂ ಹೆಚ್ಚು ಭೌತಶಾಸ್ತ್ರದ ಉಪಕರಣಗಳ ರಚನೆ ಹಾಗೂ ಅವುಗಳನ್ನು ಪ್ರದರ್ಶಿಸುವ ವಿಧಾನವನ್ನು ಶಿಕ್ಷಕರಿಗೆ ತಿಳಿಸಿದರು.
- ಕಾರ್ಯಗಾರವನ್ನು ಟ್ರಸ್ಟಿನ ಆಡಳಿತಾಧಿಕಾರಿಯಾದ ಶ್ರೀ ಕೃಷ್ಣಾನಂದ ವಿ.ಶೆಟ್ಟಿ ಉದ್ಘಾಟಿಸಿದರು. ಕಾರ್ಯಗಾರದ ಕೊನೆಯಲ್ಲಿ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಕಾರ್ಯಗಾರಕ್ಕೆ ಭೆಟ್ಟಿ ನೀಡಿ ಹಲವಾರು ಉಪಕರಣಗಳನ್ನು ವೀಕ್ಷಿಸಿ ಕಾರ್ಯಗಾರದ ಕುರಿತು ಶಿಕ್ಷಕರೊಂದಿಗೆ ಚರ್ಚಿಸಿ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ.
- ಮುಖ್ಯಾಧ್ಯಾಪಕರಾದ ಶ್ರೀ ಎ.ಎಂ.ಮುಲ್ಲಾರವರು ಕಾರ್ಯಕ್ರಮದ ಸಂಘಟಕರಾಗಿ, ಪ್ರಾಚಾರ್ಯರಾದ ಶ್ರೀ ರವೀಂದ್ರ ಕೇಣಿಯವರು ಕಾರ್ಯಕ್ರಮದ ಮೇಲ್ವಿಚಾರಣೆಯ ಜವಾಬ್ದಾರಿ ವಹಿಸಿಕೊಂಡು ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡಲು ವಿಶೇಷ ಶ್ರಮ ವಹಿಸಿದ್ದಾರೆ. ಈ ಕಾರ್ಯಗಾರ ಸಂಘಟಿಸಿದ ಬಗ್ಗೆ ಟ್ರಸ್ಟಿನ ಪರವಾಗಿ ಅವರನ್ನು ಅಭಿನಂದಿಸುತ್ತೇನೆ.

## 9. ಸಂಸ್ಥೆಗಳಿಗೆ ಡೆಸ್ಕು ಮತ್ತು ಬೆಂಚುಗಳನ್ನು ಪೂರೈಸಿದ ಕುರಿತು

2010–11ನೇ ಸಾಲಿನಲ್ಲಿ ಟ್ರಸ್ಟಿನ ವತಿಯಿಂದ ಒಟ್ಟೂ 200 ಡೆಸ್ಕ–ಬೆಂಚುಗಳನ್ನು ರೂ.2,70,000 ವೆಚ್ಚದಲ್ಲಿ ಮಾಡಿಸಲಾಗಿತ್ತು. ಈ ಡೆಸ್ಕು–ಬೆಂಚುಗಳನ್ನು ಸಂಸ್ಥೆಗಳ ಕೋರಿಕೆಯ ಮೇರೆಗೆ ಈ ಕೆಳಗಿನಂತೆ ವಿತರಿಸಲಾಗಿದೆ.

| | |
|---|---|
| 100 ಡೆಸ್ಕು ಮತ್ತು ಬೆಂಚುಗಳು | ಆಂಗ್ಲ ಮಾಧ್ಯಮ ಪ್ರಾಥಮಿಕ ಶಾಲೆ, ದಾಂಡೇಲಿ |
| 30 ಡೆಸ್ಕು ಮತ್ತು ಬೆಂಚುಗಳು | ಪಿ.ಎಂ.ಹೈಸ್ಕೂಲ, ಅಂಕೋಲಾ |
| 25 ಡೆಸ್ಕು ಮತ್ತು ಬೆಂಚುಗಳು | ಜನತಾ ವಿದ್ಯಾಲಯ, ಕಡವಾಡ |
| 25 ಡೆಸ್ಕು ಮತ್ತು ಬೆಂಚುಗಳು | ಜನತಾ ವಿದ್ಯಾಲಯ, ಧಾರೇಶ್ವರ |
| 20 ಡೆಸ್ಕು ಮತ್ತು ಬೆಂಚುಗಳು | ಜನತಾ ವಿದ್ಯಾಲಯ, ಮಿರ್ಜಾನ–ಕೋಡಕಣಿ |

ಈ ಡೆಸ್ಕು ಬೆಂಚುಗಳನ್ನು ಮಾಡಿಸಿ ಕೊಡುವಲ್ಲಿ ಟ್ರಸ್ಟಿನ ಧರ್ಮದರ್ಶಿಗಳಾದ ಶ್ರೀ ವಾಮನ ಎನ್.ಪೈಯವರು ಪೂರ್ಣ ಸಹಕಾರ ನೀಡುರುತ್ತಾರೆ. ಅವರಿಗೂ ಅಭಿನಂದನೆಗಳು.

## 10. ಸಮವಸ್ತ್ರದ ಕುರಿತು

ಕಳೆದ ವರ್ಷ ನಡೆದ ವಾರ್ಷಿಕ ಸಭೆಯಲ್ಲಿ ಟ್ರಸ್ಟು ನಡೆಸುತ್ತಿರುವ ಎಲ್ಲಾ ಶಾಲೆಗಳಲ್ಲಿ ಏಕರೂಪದ ಹಾಗೂ ಉತ್ತಮ ಗುಣಮಟ್ಟದ ಸಮವಸ್ತ್ರ ಇರುವಂತೆ ಸಲಹೆ ನೀಡಲು ಪಿ.ಎಂ.ಸಂಯುಕ್ತ ಪದವಿ

ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಶ್ರೀ ರವೀಂದ್ರ ಕೇಣಿಯವರ ಸಂಚಾಲಕತ್ವದಲ್ಲಿ ಒಂದು ಸಮಿತಿ ರಚಿಸಲಾಗಿತ್ತು. ಈ ಸಮಿತಿಯು ಸಭೆ ಸೇರಿ ಎಲ್.ಸಿ.ಡಿ. ಮೂಲಕ ವಿವಿಧ ಮಾದರಿಯ ಸಮವಸ್ತ್ರ ಪರಿಶೀಲಿಸಿ ಅದಕ್ಕೆ ತಗಲುವ ವೆಚ್ಚದ ಬಗ್ಗೆ ಚರ್ಚಿಸಿ ಈ ಕೆಳಗಿನಂತೆ ಅಭಿಪ್ರಾಯ ಪಟ್ಟಿರುತ್ತದೆ.

1. ನಮ್ಮ ಸಂಸ್ಥೆ ನಡೆಸುವ ಬಹುತೇಕ ಶಾಲೆಗಳು ಗ್ರಾಮೀಣ ಭಾಗದಲ್ಲಿ ಇರುತ್ತದೆ. ಉತ್ತಮ ಗುಣಮಟ್ಟದ ಸಮವಸ್ತ್ರವನ್ನು ಖರೀದಿಸುವದಾದರೆ ಪ್ರತಿಯೊಂದು ಸೆಟ್ಟಿಗೆ ರೂ.500 ರಿಂದ 600ರ ವರೆಗೆ ಖರ್ಚು ಬರುತ್ತದೆ. ಈಗ ವಿದ್ಯಾರ್ಥಿಗಳು ಉಪಯೋಗಿಸುವ ಸಮವಸ್ತ್ರದ ಸೆಟ್ಟಿಗೆ ರೂ.250 ರಿಂದ 350 ಆಗುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಬಡ ಕುಟುಂಬದಿಂದ ಬರುವದರಿಂದ ಉತ್ತಮ ಗುಣಮಟ್ಟದ ಸಮವಸ್ತ್ರ ಖರೀದುಸುವವರ ಸಂಖ್ಯೆ ಬಹಳ ಕಡಿಮೆ ಆಗಬಹುದೆಂದು ಸಮಿತಿ ಅಭಿಪ್ರಾಯ ಪಟ್ಟಿದೆ.
2. ಈಗಿರುವ ಸಮವಸ್ತ್ರದಲ್ಲಿ ಸ್ವಲ್ಪ ಮಟ್ಟಿನ ಮಾರ್ಪಾಡು ಮಾಡಿ ಅದನ್ನೆ ಮುಂದುವರೆಸುವದು ಹೆಚ್ಚು ಸೂಕ್ತವೆಂದು ಸಮಿತಿಯು ಅಭಿಪ್ರಾಯ ಪಟ್ಟಿರುತ್ತದೆ.

## 11. ಟ್ರಸ್ಟಿನ ತ್ರೈಮಾಸಿಕ ಸಂಚಿಕೆ:

ಕೆನರಾ ವೆಲ್‌ಫೇರ್ ಟ್ರಸ್ಟು ಜನವರಿ 2007 ರಿಂದ ತ್ರೈಮಾಸಿಕ ಸಂಚಿಕೆ "ಸಂದೇಶ ಪತ್ರ" ವನ್ನು ಪ್ರಕಟಿಸಿಸುತ್ತ ಬಂದಿದ್ದು ಇದುವರೆಗೆ ಒಟ್ಟೂ 7 ಸಂಚಿಕೆಯನ್ನು ಹೊರತರಲಾಗಿದೆ. ಕಾರಣಾಂತರದಿಂದ ಅಕ್ಟೋಬರ 2008 ರಿಂದ ಮಾರ್ಚ 2011ರ ವರೆಗಿನ 6 ಸಂಚಿಕೆಗಳನ್ನು ಹೊರತರಲು ವಿಳಂಬವಾಗಿದೆ. ಈಗ ಅಕ್ಟೋಬರ 2008 ರಿಂದ ಮಾರ್ಚ 2010ರ ವರೆಗಿನ (8 ರಿಂದ 13) ಕ್ರೋಢಿಕೃತ ಸಂಚಿಕೆಯನ್ನು ಪ್ರಕಟಿಸಿ ಇಂದು ಹೊರತರಲಾಗಿದೆ. ತ್ರೈಮಾಸಿಕ ಸಂಚಿಕೆಯಲ್ಲಿ ಮುಖ್ಯವಾಗಿ ಸಂಸ್ಥೆಗಳ ಪರಿಚಯ ನೀಡುವದು, ಪ್ರಶಸ್ತಿ ವಿಜೇತರ ಬಗ್ಗೆ ಮಾಹಿತಿ, ಶಾಲಾ ಕಾಲೇಜುಗಳಲ್ಲಿ ನಡೆಯುವ ಶೈಕ್ಷಣಿಕ ಕಾರ್ಯಾಗಾರದ ಕುರಿತು ಮಾಹಿತಿ, ವಿದ್ಯಾರ್ಥಿಗಳ ಪಠ್ಯ ಮತ್ತು ಪಠ್ಯೇತರ ವಿಭಾಗದಲ್ಲಿ ತೋರಿಸಿದ ವಿಶೇಷ ಸಾಧನೆ, ಸೇವಾ ನಿವೃತ್ತಿ ಹೊಂದಿದವರ ಮಾಹಿತಿ, ಮಹತ್ವದ ಸುತ್ತೋಲೆ ಮತ್ತು ಸರ್ಕಾರಿ ಆದೇಶದ ಮಾಹಿತಿ, ಸೇವಾ ಜೇಷ್ಠತೆ ಯಾದಿ, ಶಿಕ್ಷಣಕ್ಕೆ ಸಂಬಂಧಿಸಿದ ಹೊಸ ವಿಚಾರಗಳು ಮುಂತಾದ ವಿವರಗಳನ್ನು ಒಳಗೊಂಡಿರುತ್ತದೆ. ಈ ಕುರಿತು ಸಂಸ್ಥೆಯ ಮುಖ್ಯಸ್ಥರು ಕಾಲಕಾಲಕ್ಕೆ ಸರಿಯಾಗಿ ಮಾಹಿತಿಯನ್ನು ಟ್ರಸ್ಟಿನ ಕಾರ್ಯಾಲಯಕ್ಕೆ ಸಲ್ಲಿಸುತ್ತಿರಬೇಕು. ಅಂದರೆ ಮಾತ್ರ ಸಕಾಲದಲ್ಲಿ ಸಂದೇಶ ಪತ್ರ ಪ್ರಕಟಿಸಲು ಸಾಧ್ಯವಾಗುತ್ತದೆ. ಈ ದಿಶೆಯಲ್ಲಿ ಎಲ್ಲ ಸಂಸ್ಥೆಯ ಮುಖ್ಯಸ್ಥರು ಸರಿಯಾಗಿ ಸ್ಪಂದಿಸಿದರೆ ಮಾತ್ರ ಟ್ರಸ್ಟು ಪ್ರಕಟಿಸುತ್ತಿರುವ ತ್ರೈಮಾಸಿಕ ಸಂದೇಶ ಪತ್ರದ ಉಪಯೋಗ ಹಾಗೂ ಸಾರ್ಥಕತೆ ಆಗಲು ಸಾಧ್ಯ.

ಈ ಸಂದೇಶ ಪತ್ರ ಪ್ರಕಟಿಸುವ ಹಿಂದೆ ಇರುವ ಅಧ್ಯಕ್ಷರ ಸಾಮಾಜಿಕ ಕಳಕಳಿ ಹಾಗೂ ಪ್ರಯತ್ನವನ್ನು ತಾವೆಲ್ಲರೂ ಅರ್ಥ ಮಾಡಿಕೊಳ್ಳಬೇಕು. ಈ ಸಂಚಿಕೆಯನ್ನು ಹೊರತರಲು ಶ್ರೀ ವಿಷ್ಣು ನಾಯ್ಕ ಪ್ರಧಾನ ಸಂಪಾದಕರು ಹಾಗೂ ಸಂಪಾದಕ ಮಂಡಳಿ ವಿಶೇಷ ಕಾಳಜಿ ವಹಿಸಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರೆಲ್ಲರಿಗೆ ಅಭಿನಂದನೆ ಸಲ್ಲಿಸುತ್ತೇನೆ.

## 12. ಪಿ.ಎಂ.ಪ್ರೌಢ ಶಾಲೆಯಲ್ಲಿ ಆಂಗ್ಲ ಮಾಧ್ಯಮ ವಿಭಾಗ ಪ್ರಾರಂಭ:

ಶಿಕ್ಷಣ ಇಲಾಖೆಯವರು ಪಿ.ಎಂ.ಪ್ರೌಢಶಾಲಾ ವಿಭಾಗಕ್ಕೆ 8ನೇ ತರಗತಿಯಿಂದ ಆಂಗ್ಲ ಮಾಧ್ಯಮದಲ್ಲಿ ಬೋಧನೆ ಮಾಡಲು ಅನುಮತಿ ನೀಡಿದ್ದಾರೆ. ಆದ್ದರಿಂದ 2011–12ನೇ ಶೈಕ್ಷಣಿಕ ವರ್ಷದಿಂದ ಆಂಗ್ಲ ಮಾಧ್ಯಮದಲ್ಲಿ ಪಿ.ಎಂ.ಪ್ರೌಢ ಶಾಲೆಯಲ್ಲಿ ಒಂದು ವಿಭಾಗ ಹೊಸದಾಗಿ ಪ್ರಾರಂಭಿಸಲಾಗಿದೆ. ಈ ವರ್ಷ 8ನೇ ವರ್ಗಕ್ಕೆ ಆಂಗ್ಲ ಮಾಧ್ಯಮದಲ್ಲಿ ಒಟ್ಟೂ 54 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಆಂಗ್ಲ ಮಾಧ್ಯಮದ ಹೊಸ ವಿಭಾಗ ಪ್ರಾರಂಭವಾದುದರಿಂದ ಇದು ಟ್ರಸ್ಟಿನ 44ನೇ ಸಂಸ್ಥೆಯಾಗಿದೆ. ಈ ಸಂಸ್ಥೆ ಪ್ರಾರಂಭಿಸಲು ಶ್ರೀ ರವೀಂದ್ರ ಕೇಣಿಯವರು ವಿಶೇಷ ಶ್ರಮ ವಹಿಸಿದ್ದಾರೆ. ಅವರಿಗೆ ಅಭಿನಂದನೆಗಳು.

## 13. ಸುವರ್ಣ ಮಹೋತ್ಸವ ಆಚರಣೆ

1. ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಇಂಗ್ಲೀಷ ಮತ್ತು ಕನ್ನಡ ಮಾಧ್ಯಮ ಪ್ರಾಥಮಿಕ ಶಾಲೆ ದಾಂಡೇಲಿ ಇವರು 2011 ರಲ್ಲಿ ಸಂಸ್ಥೆಯ ಸುವರ್ಣ ಮಹೋತ್ಸವವನ್ನು 3 ದಿವಸಗಳ ಕಾಲ ವಿಜೃಂಭಣೆಯಿಂದ ನೆರವೇರಿಸಿದ್ದಾರೆ. ಎಲ್ಲ ಸಂಸ್ಥೆಗಳಿಂದ, ದಾನಿಗಳಿಂದ, ಪಾಲಕರಿಂದ, ಹಳೆವಿದ್ಯಾರ್ಥಿಗಳಿಂದ, ಸಿಬ್ಬಂದಿಗಳಿಂದ ಒಟ್ಟೂ ರೂ.11,32,584/– ಸುವರ್ಣ ಮಹೋತ್ಸವದ ನಿಧಿಯಾಗಿ ಸಂಗ್ರಹಿಸಿದ್ದಾರೆ. ಈ ಹಣದಲ್ಲಿ ಶಾಲಾ/ಕಾಲೇಜುಗಳ ಅಭಿವೃದ್ಧಿಗಾಗಿ ರೂ.5,50,000/– ನೀಡಿದ್ದಾರೆ. ಉಳಿದ ಹಣ ರೂ.5,82,584/– ಸುವರ್ಣ ಮಹೋತ್ಸವದ ಆಚರಣೆಗಾಗಿ ಹಾಗೂ ವಿವಿಧ ಕಾರ್ಯಕ್ರಮಗಳಿಗಾಗಿ ವಿನಿಯೋಗಿಸಿರುತ್ತಾರೆ. ಲೆಕ್ಕಪತ್ರದ ಆಡಿಟ ಮುಗಿಸಿ ಸಂಸ್ಥೆಗೆ ವರದಿ ನೀಡಿರುತ್ತಾರೆ. ಈ ಒಂದು ಕಾರ್ಯಕ್ರಮ ಯಶಸ್ವಿಯಾಗಿ ನಿರ್ವಹಿಸುವಲ್ಲಿ ದುಡಿದ ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಎಮ್.ಎಸ್.ಲಮಾಣಿಯವರಿಗೆ, ಮುಖ್ಯಾಧ್ಯಾಪಕಿಯರಾದ ಶ್ರೀಮತಿ ಎ.ಸಿ.ರೇವಣಕರ ಅವರಿಗೆ ಸಂಸ್ಥೆಯ ಎಲ್ಲ ಸಿಬ್ಬಂದಿಗಳಿಗೆ ಹಾಗೂ ಸುವರ್ಣ ಮಹೋತ್ಸವ ಸಮಿತಿಯ ಎಲ್ಲ ಸದಸ್ಯರಿಗೆ ಈ ಸಂದರ್ಭದಲ್ಲಿ ಟ್ರಸ್ಟಿನ ಪರವಾಗಿ ಅಭಿನಂದಿಸುತ್ತೇನೆ.

2. ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಕಡತೋಕಾದ ಸುವರ್ಣ ಮಹೋತ್ಸವವನ್ನು ಜನವರಿ 2009ರಲ್ಲಿ ವಿಜೃಂಭಣೆಯಿಂದ ಆಚರಿಸಿರುತ್ತಾರೆ. ಸುವರ್ಣ ಮಹೋತ್ಸವದ ಜಮಾ–ಖರ್ಚು ಪತ್ರಿಕೆ ಆಡಿಟ ಮಾಡಿಸಿ ಇದುವರೆಗೆ ಟ್ರಸ್ಟಿಗೆ ಸಲ್ಲಿಸಿರುವದಿಲ್ಲ. ಸಂಸ್ಥೆಯ ಮುಖ್ಯಸ್ಥರು ಕೂಡಲೆ ಜಮಾ–ಖರ್ಚು ಪತ್ರಿಕೆ ವರದಿಯೊಂದಿಗೆ ಟ್ರಸ್ಟಿಗೆ ಸಲ್ಲಿಸುವಂತೆ ವಿನಂತಿಸಲಾಗಿದೆ. ಸುವರ್ಣ ಮಹೋತ್ಸವವನ್ನು ಯಶಸ್ವಿಯಾಗಿ ಆಚರಣೆ ಮಾಡುವಲ್ಲಿ ದುಡಿದ ಸಂಸ್ಥೆಯ ಪ್ರಾಚಾರ್ಯರಾದ ಶ್ರೀ ಭೀಮರಾಜ ಅವರಿಗೂ, ಶಾಲಾ ಕಾಲೇಜುಗಳ ಸಿಬ್ಬಂದಿಯವರಿಗೂ, ಸುವರ್ಣ ಮಹೋತ್ಸವ ಸಮಿತಿಯ ಎಲ್ಲ ಸದಸ್ಯರಿಗೂ ಟ್ರಸ್ಟಿನ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ.

## 14. ಟ್ರಸ್ಟಿನ ವಿವಿಧ ಕೇಂದ್ರಗಳಲ್ಲಿ ನಡೆದ ಅಭಿವೃದ್ಧಿ ಹಾಗೂ ಇತರ ಕೆಲಸಗಳು

1) ಪಿ.ಎಂ.ಹೈಸ್ಕೂಲ ಅಂಕೋಲಾದಲ್ಲಿ ಬಯಲು ರಂಗ ಮಂದಿರ ನಿರ್ಮಾಣ ಸಿಬ್ಬಂದಿಗಳ ಹಾಗೂ ಹೆಣ್ಣುಮಕ್ಕಳ ಶೌಚಾಲಯ, ಡಾ.ದಿನಕರ ದೇಸಾಯಿ ಸ್ಮಾರಕ ಕಟ್ಟಡ ಹೀಗೆ ಒಟ್ಟೂ ರೂ.7,53,203/– ಖರ್ಚು ಮಾಡಲಾಗಿದೆ. ಈ ಕೆಲಸವನ್ನು ಸಾರ್ವಜನಿಕರ ದೇಣಿಗೆಯಿಂದ ಹಾಗೂ ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ.
2) ಎಸ್.ಕೆ.ಪಿ.ಹೈಸ್ಕೂಲ ಕತಗಾಲದಲ್ಲಿ ಕಂಪೌಂಡ ಗೋಡೆ ನಿರ್ಮಾಣಕ್ಕೆ, ಶಾಲಾ ಕೈತೋಟ ಅಭಿವೃದ್ಧಿಗೆ ಮತ್ತು ಶೌಚಾಲಯಕ್ಕೆ ಒಟ್ಟೂ ರೂ.1,53,581/– ಖರ್ಚು ಮಾಡಲಾಗಿದೆ. ಈ ಕಾರ್ಯವನ್ನು ಜಿಲ್ಲಾ ಪಂಚಾಯತ, ಅರಣ್ಯ ಇಲಾಖೆ, ದಾನಿಗಳ ನೆರವಿನಿಂದ ಹಾಗೂ ಟ್ರಸ್ಟಿನ ಸಹಾಯದಿಂದ ಮಾಡಲಾಗಿದೆ.
3) ಜನತಾ ವಿದ್ಯಾಲಯ ಕಡವಾಡ ಶಾಲೆಗೆ ಕುಡಿಯುವ ನೀರಿನ ಸೌಲಭ್ಯ ಹಾಗೂ ವಿದ್ಯಾರ್ಥಿನಿಯರ ಶೌಚಾಲಯ ನಿರ್ಮಿಸಲು ರೂ.1,28,000/– ಖರ್ಚು ಮಾಡಲಾಗಿದೆ. ಈ ಹಣವನ್ನು ಗ್ರಾಮ ಪಂಚಾಯತ ಕಡವಾಡ ನೀಡಿದೆ.
4) ಜನತಾ ವಿದ್ಯಾಲಯ ಸಂಯುಕ್ತ ಪದವಿ ಪೂರ್ವ ಕಾಲೇಜ, ಕಡತೋಕಾದಲ್ಲಿ ನೆಲಸಮತಟ್ಟು ಮಾಡಲು, ಬಾವಿ ರಿಪೇರಿ ಬಗ್ಗೆ, ಆಟದ ಮೈದಾನ ಅಭಿವೃದ್ಧಿ ಪಡಿಸುವ ಬಗ್ಗೆ ರೂ.5,50,000/– ಖರ್ಚು ಮಾಡಲಾಗಿದೆ. ಈ ಹಣವನ್ನು, ಜಿಲ್ಲಾ ಪಂಚಾಯತ, ಉದ್ಯೋಗ ಖಾತ್ರಿ ಯೋಜನೆ ಹಾಗೂ ಯುವಜನ ಕ್ರೀಡಾ ಇಲಾಖೆಯ ಮೂಲಕ ಮಾಡಿಸಲಾಗಿದೆ.
5) ಜನತಾ ವಿದ್ಯಾಲಯ ಮುದಗಾ ಶಾಲೆಯ ರಿಪೇರಿ ಹಾಗೂ ಧ್ವಜದ ಕಟ್ಟೆಗೆ ಒಟ್ಟೂ ರೂ.1,29,152/– ಖರ್ಚು ಮಾಡಲಾಗಿದೆ. ಈ ಕೆಲಸವನ್ನು ದಾನಿಗಳ ಹಾಗೂ ಟ್ರಸ್ಟಿನ ನೆರವಿನಿಂದ ಮಾಡಲಾಗಿದೆ.

6) ಜನತಾ ವಿದ್ಯಾಲಯ ಕಾಸರಕೋಡ ಶಾಲೆಯಲ್ಲಿ ಶೌಚಾಲಯ ನವೀಕರಿಸಲಾಗಿದೆ. ಇದಕ್ಕೆ ರೂ.45,000/- ಖರ್ಚು ಮಾಡಲಾಗಿದೆ. ಈ ಕಾರ್ಯವನ್ನು ಟ್ರಸ್ಟಿನಿಂದ ನೀಡಿದ ಹಣ ಹಾಗೂ ದಾನಿಗಳ ನೆರವಿನಿಂದ ಮಾಡಲಾಗಿದೆ.

7) ಗೋಖಲೆ ಸೆಂಟಿನರಿ ಪದವಿ ಕಾಲೇಜಿನ ಆವಾರದಲ್ಲಿ ಇಂಗು ಗುಂಡಿ ನಿರ್ಮಿಸಲಾಗಿದೆ. ಕಾಲೇಜಿನ ಗಾರ್ಡನ ಅಭಿವೃದ್ಧಿ ಪಡಿಸಲಾಗಿದೆ. ಇದಕ್ಕೆ ಒಟ್ಟೂ ರೂ.54,207/- ಖರ್ಚು ಮಾಡಲಾಗಿದೆ. ದಾನಿಗಳ ನೆರವಿನಿಂದ ಹಾಗೂ ಆಡಳಿತ ಮಂಡಳಿ ಖಾತೆಯಿಂದ ನಿರ್ವಹಿಸಲಾಗಿದೆ. ಗೋಖಲೆ ಸೆಂಟಿನರಿ ಕಾಲೇಜಿನ ಭೌತಶಾಸ್ತ್ರ ಹಾಗೂ ರಸಾಯನಶಾಸ್ತ್ರ ಪ್ರಯೋಗಾಲಯಕ್ಕೆ ಭಾರತೀಯ ಸ್ಟೇಟ ಬ್ಯಾಂಕಿನವರು ರೂ.7,41,250/- ಧನ ಸಹಾಯವನ್ನು ಮಾಡಿರುತ್ತಾರೆ. ಈ ಹಣವನ್ನು ಪ್ರಯೋಗಾಲಯ ಅಭಿವೃದ್ಧಿಗೆ 2011-12ರಲ್ಲಿ ವಿನಿಯೋಗಿಸಲಾಗುವದು. ದೊಡ್ಡ ಮೊತ್ತದ ಹಣ ನೀಡಿದ ಸ್ಟೇಟ ಬ್ಯಾಂಕಿನ ಅಧಿಕಾರಿಗಳಿಗೆ ಟ್ರಸ್ಟು ಋಣಿಯಾಗಿರುತ್ತದೆ.

8) ಇಂಗ್ಲೀಷ/ಕನ್ನಡ ಮಿಡಿಯಮ ಸ್ಕೂಲ ದಾಂಡೇಲಿಯ ಕಟ್ಟಡ ರಿಪೇರಿ ಬಗ್ಗೆ ಪೇಂಟಿಂಗ ಬಗ್ಗೆ ಹಾಗೂ ಫರ್ನಿಚರ ರಿಪೇರಿ ಬಗ್ಗೆ ಒಟ್ಟೂ ರೂ.1,54,507/-, ಕಟ್ಟಡದ ಮುಂದಿನ ಗಾರ್ಡನ ಅಭಿವೃದ್ಧಿಗಾಗಿ ರೂ.1,64,500, ಗ್ರಿಲ್ಸ ಕೂಡಿಸಿದ್ದು ಹಾಗೂ ಕುಡಿಯುವ ನೀರಿನ ವ್ಯವಸ್ಥೆಗೆ ರೂ.76,400/-, ಶಾಲಾ ಆವರಣದ ಒಳಗಿನ ರಸ್ತೆಗೆ Tiles ಕೂಡ್ರಿಸಿದ್ದರ ಬಗ್ಗೆ ಖರ್ಚು ರೂ.10,79,716/- ಈ ಎಲ್ಲ ಕೆಲಸಗಳಿಗೆ ಒಟ್ಟೂ ರೂ.14,75,123/- ಖರ್ಚು ಮಾಡಲಾಗಿದೆ. ಈ ಹಣವನ್ನು ಆಡಳಿತ ಮಂಡಳಿ ಖಾತೆಯಿಂದ ಹಾಗೂ ಸುವರ್ಣ ಮಹೋತ್ಸವ ನಿಧಿಯಿಂದ ಖರ್ಚು ಮಾಡಲಾಗಿದೆ.

9) ಜನತಾ ವಿದ್ಯಾಲಯ ಅನಿಲಗೋಡ ಶಾಲೆಯ ತಡೆಗೋಡೆ ನಿರ್ಮಾಣಕ್ಕೆ ರೂ.2,00,000/-, ಕುಡಿಯುವ ನೀರು ಮತ್ತು ಇತರ ವ್ಯವಸ್ಥೆಯ ಬಗ್ಗೆ ರೂ.43,166, ಒಟ್ಟೂ ರೂ.2,43,166/- ಖರ್ಚು ಮಾಡಲಾಗಿದೆ. ಈ ಹಣವನ್ನು ಗ್ರಾಮ ಪಂಚಾಯತ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಹಾಗೂ ಟ್ರಸ್ಟಿನ ನೆರವಿನಿಂದ ಮಾಡಲಾಗಿದೆ..

10) ಜನತಾ ವಿದ್ಯಾಲಯ ಕುಳವೆ ಬರೂರ ಶಾಲೆಯ ಹೆಣ್ಣು ಮಕ್ಕಳ ಶೌಚಾಲಯಕ್ಕೆ ರೂ.73,400/- ಖರ್ಚು ಮಾಡಲಾಗಿದೆ. ಈ ಹಣವನ್ನು ಆಡಳಿತ ಮಂಡಳಿ ಖಾತೆಯಿಂದ, ಗ್ರಾಮ ಪಂಚಾಯತ ಹಾಗೂ ದೇಣಿಗೆ ಬಂದ ಹಣದಿಂದ ಖರ್ಚು ಮಾಡಲಾಗಿದೆ.

11) ದಾಂಡೇಲಿಯ ಬಿ.ಇಡ್.ಕಾಲೇಜಿನ ಕಂಪ್ಯೂಟರ ವಿಭಾಗಕ್ಕೆ, ಲೈಬ್ರರಿ ಫರ್ನಿಚರ, ಪ್ರಯೋಗಾಲಯ ಸಲಕರಣೆಗೆ ರೂ.1,25,000/- ಖರ್ಚು ಮಾಡಲಾಗಿದೆ. ಈ ಖರ್ಚನ್ನು ಆಡಳಿತ ಮಂಡಳಿ ಖಾತೆಯಿಂದ ಮಾಡಲಾಗಿದೆ.

12) ಜನತಾ ವಿದ್ಯಾಲಯ ಶಿರಾಲಿ ಶಾಲೆಯ ಕಂಪೌಂಡ ಗೋಡೆಯ ನಿರ್ಮಾಣ, ಶೌಚಾಲಯ, ಸೈಕಲ್ ಸ್ಟೆಂಡ ನಿರ್ಮಾಣಕ್ಕೆ ರೂ.94,400/- ಖರ್ಚು ಮಾಡಲಾಗಿದೆ. ಶಿರಾಲಿಯ ಪ್ರಾಥಮಿಕ ಶಾಲಾ ಕಟ್ಟಡಕ್ಕೆ ಈ ವರ್ಷ ರೂ.1,84,900/- ಖರ್ಚು ಮಾಡಲಾಗಿದೆ. ಈ ಕೆಲಸವನ್ನು ದಾನಿಗಳ

ನೆರವಿನಿಂದ ಹಾಗೂ ಆಡಳಿತ ಮಂಡಳಿ ಖಾತೆಯಿಂದ ಖರ್ಚು ಮಾಡಲಾಗಿದೆ. ಒಟ್ಟೂ ಖರ್ಚು ಮಾಡಿದ ಹಣ ರೂ.2,79,300/–.

13) ಜನತಾ ವಿದ್ಯಾಲಯ ಬಾಡ–ಕಾಗಾಲ ಶಾಲೆಗೆ ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ರೂ.30,000/– ಖರ್ಚು ಮಾಡಲಾಗಿದೆ. ಈ ಹಣವನ್ನು ತಾಲೂಕ ಪಂಚಾಯತ ಕುಮಟಾ ನೀಡಿದೆ.

14) ಜನತಾ ವಿದ್ಯಾಲಯ ಮಿರ್ಜಾನ ಶಾಲೆಯ ಬಾವಿ ರಿಪೇರಿ ಹಾಗೂ ಶಾಲೆಯ ಕೈತೋಟ ನವೀಕರಿಸಲಾಗಿದೆ. ಇದಕ್ಕೆ ಒಟ್ಟೂ ರೂ.1,19,700/– ಖರ್ಚು ಮಾಡಲಾಗಿದೆ. ಜಿಲ್ಲಾ ಪಂಚಾಯತ ಒಂದು ಲಕ್ಷ ನೀಡಿದೆ. ಉಳಿದ ಹಣ ಟ್ರಸ್ಟು ಭರಿಸಿದೆ.

15) ಜನತಾ ವಿದ್ಯಾಲಯ ಧಾರೇಶ್ವರ ಶಾಲೆಯ ಕಂಪೌಂಡ ಗೋಡೆ ನಿರ್ಮಿಸಲು ಒಂದು ಲಕ್ಷ ಖರ್ಚು ಮಾಡಲಾಗಿದೆ. ಈ ಹಣವನ್ನು ಗ್ರಾಮ ಪಮಚಾಯತ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ನಿರ್ಮಿಸಲಾಗಿದೆ. ಪ್ರಾಥಮಿಕ ಶಾಲಾ ಮಕ್ಕಳ ಬಿಸಿಯೂಟದ ಅಡಿಗೆ ಕೋಣೆ ನಿರ್ಮಾಣಕ್ಕೆ ರೂ.36,854/– ಹಾಗೂ 5 ವರ್ಗಕೋಣೆ ನಿರ್ಮಾಣಕ್ಕೆ ಈ ವರ್ಷ ರೂ.5,28,549/– ಖರ್ಚು ಮಾಡಲಾಗಿದೆ. ಶಾಲಾ ಆವಾರಕ್ಕೆ ಹೊಂದಿಕೊಂಡಿದ್ದ ಗುಡ್ಡ ಕಡಿದು ನೆಲಸಮತಟ್ಟು ಮಾಡಿದ ಬಗ್ಗೆ ರೂ.62,891/– ಹೀಗೆ ಒಟ್ಟೂ ರೂ.7,28,294 ಖರ್ಚು ಮಾಡಲಾಗಿದೆ. ಇದನ್ನು ಪಾಲಕರ, ದಾನಿಗಳ ಹಾಗೂ ಟ್ರಸ್ಟಿನ ನೆರವಿನಿಂದ ಮಾಡಲಾಗಿದೆ.

16) ಜನತಾ ವಿದ್ಯಾಲಯ ಬೇಡಕಣಿ ಶಾಲೆಯ ಕಟ್ಟಡ ರಿಪೇರಿ ಆಟದ ಮೈದಾನದ ಬಗ್ಗೆ ರೂ.90,000/– ಖರ್ಚು ಮಾಡಲಾಗಿದೆ. ಈ ಹಣವನ್ನು ಕೇಂದ್ರ ಸರಕಾರದ ಅನುದಾನದಿಂದ ಹಾಗೂ ಟ್ರಸ್ಟಿನ ನೆರವಿನೊಂದಿಗೆ ಮಾಡಲಾಗಿದೆ.

17) ಜನತಾ ವಿದ್ಯಾಲಯ, ದಾಂಡೇಲಿ ಶಾಲೆಯಲ್ಲಿ ಮೈದಾನ ಸಮತಲ ಮಾಡಿದ್ದು, ಸುಣ್ಣ ಬಣ್ಣ ಕಟ್ಟಡ ರಿಪೇರಿ ಗಟಾರ ಕಟ್ಟಿಸಿದ್ದು ಮತ್ತು ಬೊರವೆಲ್ ಪೈಪಲಾಯ್ನ ಬಗ್ಗೆ ಒಟ್ಟೂ ರೂ.6,41,028/– ಖರ್ಚಾಗಿರುತ್ತದೆ. ಈ ಹಣವನ್ನು ಆಡಳಿತ ಮಂಡಳಿ ಖಾತೆಯಿಂದ ಭರಿಸಲಾಗಿದೆ.

18) 2010–2011ನೇ ಸಾಲಿನಲ್ಲಿ ಟ್ರಸ್ಟಿನ 14 ಮಾಧ್ಯಮಿಕ ಶಾಲೆಗಳಿಗೆ ಒಟ್ಟು ರೂ.105000/– ನಿರ್ವಹಣಾ ವೆಚ್ಚವೆಂದು (Contingency) ಟ್ರಸ್ಟಿನಿಂದ ನೀಡಲಾಗಿದೆ.

19) ಟ್ರಸ್ಟು ನಡೆಸುತ್ತಿರುವ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನುದಾನರಹಿತ ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ಭವಿಷ್ಯ ನಿಧಿಗಾಗಿ (P.F. contribution) ಈ ಕೆಳಗಿನಂತೆ ಹಣವನ್ನು ಖರ್ಚು ಮಾಡಲಾಗಿದೆ.


| ಅ. ನಂ. | ಶಾಲೆ/ಕಾಲೇಜಿನ ಹೆಸರು | ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ವೇತನ | ಟ್ರಸ್ಟಿನಿಂದ ನೀಡಿದ ಮೆಂಟೆನನ್ಸ ಹಣ | ಕಟ್ಟಡ ನಿರ್ಮಾಣ, ಅಭಿವೃದ್ಧಿ ಕಾರ್ಯಕ್ಕೆ ವಿನಿಯೋಗಿಸಿದ ಹಣ |
|---|---|---|---|---|
| | **Degree Colleges** | | | |
| 1. | Gokhale Centenary College, Ankola | 7,72,974 | -- | 54,207 |
| 2. | Divekar College Of Commerce, Karwar | 5,87,480 | -- | -- |
| 3. | KWT's College of Education, Dandeli | 8,37,000 | -- | 1,25,000 |
| 4 | B.C.A. College, Karwar | 3,46,665 | -- | -- |
| | **Junior Colleges** | | | |
| 5. | Gokhale Centenary P.U. College, Ankola | 8,39,281 | -- | -- |
| 6. | Divekar P.U. Commerce College, Karwar | 5,95,544 | -- | -- |
| 7. | Janata Vidyalaya Comp. Junior College, Dandeli | 1,13,667 | -- | |
| 8. | Janata Vidyalaya Comp. Junior College, Kadtoka | 60,000 | 7500 | 5,50,000 |
| 9. | Janata Vidyalaya Comp. Junior College, Shirali, Bhatkal | 2,06,000 | 7500 | 2,79,300 |
| 10. | P.M. Comp. Junior College, Ankola | 3,47,100 | -- | -- |
| 11. | Divekar P.U. Science College, Karwar | 5,46,784 | -- | -- |
| | **High Schools** | | | |
| 12. | P. M. High School, Ankola | 1,49,050 | 7500 | 7,53,203 |
| 13. | Janata Vidyalaya, Baad-Kagal, Kumta | 95,300 | 7500 | 30,000 |
| 14. | Janata Vidyalaya, Shirali, Bhatkal | 1,93,200 | -- | -- |
| 15. | Janata Vidyalaya, Dandeli | 4,15,163 | -- | 6,41,028 |
| 16. | Janata Vidyalaya, Kadwad, Karwar | 9,000 | 7500 | 1,28,000 |
| 17. | Janata Vidyalaya, Kasarkod, Honnavar | 1,32,000 | 7500 | 45,000 |
| 18. | Janata Vidyalaya, Murdeshwar, Bhatkal | 3,33,150 | 7500 | -- |
| 19. | Janata Vidyalaya, Mirjan-Kodkani | 1,31,000 | 7500 | 1,19,700 |
| 20. | Janata Vidyalaya, Kadtoka | 73,500 | -- | -- |
| 21. | Janata Vidyalaya, Mudga, Karwar | 51,500 | 7500 | 1,29,152 |
| 22. | Janata Vidyalaya, Dhareshwar, Kumta | | 7500 | 7,28,294 |
| 23. | Janata Vidyalaya, Bedkani, Siddapur | 41,450 | 7500 | 90,000 |
| 24. | S.K.P. High School, Katgal, Kumta | 69,580 | 7500 | 1,53,581 |
| 25. | Janata Vidyalaya, Anilgod, Honnavar | 11,900 | 7500 | 2,43,166 |
| 26. | Janata Vidyalaya, Kulve-Baroor, Sirsi | 47,750 | 7500 | 73,400 |

| | | | | |
|---|---|---|---|---|
| | **Primary And Pre-Primary Schools** | | | |
| 27. | English/Kannada Medium Pre-Primary & Primary School, Dandeli | 16,31,637 | -- | 14,75,123 |
| 28. | Balamandir & Tailoring School Mundgod | 20,000 | -- | -- |
| 29. | Dr. Dinkar Desai Pre-Primary/ Primary School, Ankola | 5,31,560 | -- | -- |
| 30. | Janata Vidyalaya Dinkar Pre-Primary/Primary School, Dhareshwar, Kumta | 1,85,400 | -- | -- |
| 31. | Shrimat Sadyojat Shankarashram Swamiji Balamandir, Shirali, Bhatkal | 52,000 | -- | -- |
| | **Other Social Service Institutions** | | | |
| 32. | Thakkar Bapa Tailoring School, Ankola | 12,000 | -- | -- |
| 33. | Trust Office Staff & Dinkar Kalaniketan Music School, Ankola & Karwar | 2,33,750 | -- | -- |
| | **Total (Rs.)** | **96,72,385** | **1,05,000** | **56,18,154** |

2010–11ನೇ ಸಾಲಿನಲ್ಲಿ ಟ್ರಸ್ಟು ನಡೆಸುತ್ತಿರುವ ವಿವಿಧ ಶಾಲಾ ಕಾಲೇಜುಗಳ ತಾತ್ಕಾಲಿಕ ನೌಕರರ ಭವಿಷ್ಯ ನಿಧಿಗಾಗಿ ಟ್ರಸ್ಟಿನ ವತಿಯಿಂದ ಪಾವತಿಸಿದ ಒಟ್ಟೂ ಹಣ ರೂ.4,98,874/– ಈ ಹಣವನ್ನು ಟ್ರಸ್ಟಿನಿಂದ ಹಾಗೂ ಆಡಳಿತ ಮಂಡಳಿ ಖಾತೆಯಿಂದ ಭರಿಸಲಾಗಿದೆ.

## ABSTRACT

| | | |
|---|---|---|
| **I** | ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕೆ | **96,72,385** |
| **II** | ನಿರ್ವಹಣಾ ವೆಚ್ಚಕ್ಕಾಗಿ ನೀಡಿದ ಹಣ | **1,05,000** |
| **III** | ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಿದ್ದು | **56,18,154** |
| **IV** | ಭವಿಷ್ಯನಿಧಿ ವಂತಿಗೆ ಸಂದಾಯ ಮಾಡಿದ್ದು | **4,98,874** |
| **V** | ಕ್ರೂಗರ ಫೌಂಢೇಶನ ವತಿಯಿಂದ ತಾತ್ಕಾಲಿಕ ಸಿಬ್ಬಂದಿಗಳಿಗೆ ನೀಡಿದ ಹಣ | **5,33,500** |
| | ಒಟ್ಟೂ ರೂ. | **1,64,27,913** |




ಟ್ರಸ್ಟು ತಾತ್ಕಾಲಿಕವಾಗಿ ನೇಮಕಾತಿ ಮಾಡಿಕೊಂಡ ಸಿಬ್ಬಂದಿಗಳ ವೇತನ ಹಾಗೂ ಭವಿಷ್ಯನಿಧಿ ವಂತಿಗೆಯನ್ನು ಅಭಿವೃದ್ಧಿ ಕಾರ್ಯಕ್ಕೆ ಮಾಡಿದ ವೆಚ್ಚವನ್ನು ಟ್ರಸ್ಟು ನಡೆಸುತ್ತಿರುವ ವಿವಿಧ ಕೇಂದ್ರಗಳಲ್ಲಿ ಆಡಳಿತ ಮಂಡಳಿ ಖಾತೆಗೆ ಸಂಗ್ರಹಿಸಿದ ಹಣದಿಂದ, ದಾನಿಗಳಿಂದ ಸಂಗ್ರಹಿಸಿದ ಹಣದಿಂದ, ಜಿಲ್ಲಾ ಪಂಚಾಯತ, ತಾಲೂಕ ಪಂಚಾಯತ, ಎಮ್‌ಎಲ್‌ಎ ನಿಧಿಯಿಂದ ನೀಡಿದ ಹಣದಿಂದ ಹಾಗೂ ಟ್ರಸ್ಟು ನೀಡಿದ ಹಣದಿಂದ ಭರಿಸಲಾಗಿದೆ. ಈ ಕಾರ್ಯಕ್ಕೆ ಸಹಕರಿಸಿದ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.


## 15. ಕ್ರುಗರ ಫೌಂಡೇಶನ ಕಾರವಾರ ಇವರು ತಾತ್ಕಾಲಿಕ ಶಿಕ್ಷಕರಿಗೆ ನೀಡುವ ಸಹಾಯಧನ

ಟ್ರಸ್ಟು ನಡೆಸುತ್ತಿರುವ ಎಲ್ಲ ಶಾಲೆಗಳಲ್ಲಿಯೂ ಶಿಕ್ಷಕರ ಕೊರತೆ ಇದೆ. ಈ ಕೊರತೆ ನೀಗಿಸಲು ಆಡಳಿತ ಮಂಡಳಿಯವರು ಪ್ರತಿ ವರ್ಷ ನೂರಾರು ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡು ಶಾಲೆಗಳ ಶೈಕ್ಷಣಿಕ ಮಟ್ಟ ಕುಸಿಯದಂತೆ ನೋಡಿಕೊಂಡು ಅವರಿಗೆ ಸಂಭಾವನೆ ನೀಡುತ್ತ ಬಂದಿದೆ. ಅವರಿಗೆ ನೀಡುತ್ತಿರುವ ಸಂಭಾವನೆ ಮೊತ್ತ ಕಡಿಮೆ ಇರುವದನ್ನು ಮನಗಂಡು ಟ್ರಸ್ಟಿನ ಅಧ್ಯಕ್ಷರು 2006–07ನೇ ಸಾಲಿನಿಂದ ಎಲ್ಲ ತಾತ್ಕಾಲಿಕ ಶಿಕ್ಷಕರಿಗೆ ಪ್ರತಿ ತಿಂಗಳು ರೂ.500/– ರಂತೆ ಕ್ರುಗರ್ ಫೌಂಡೆಶನ್ ನೆರವಿನಿಂದ ಸಹಾಯಧನವಾಗಿ ನೀಡುತ್ತ ಬಂದಿದ್ದಾರೆ. 2010–11ನೇ ಸಾಲಿನಲ್ಲಿ ಈ ಸಂಭಾವನೆಯನ್ನು ರೂ.1000/–ಕ್ಕೆ ಹೆಚ್ಚಿಸಿರುವರು. ಈ ಸಂಭಾವನೆ ಪಡೆಯುವ ಎಲ್ಲ ಶಿಕ್ಷಕರು ಶಾಲೆಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನೀಡಿ ಅವರ ಶೈಕ್ಷಣಿಕ ಮಟ್ಟವನ್ನು ಹೆಚ್ಚಿಸುವದು ಇದರ

ಮುಖ್ಯ ಉದ್ದೇಶವಾಗಿದೆ. ಈ ಉದ್ದೇಶವನ್ನು ಈಡೇರಿಸಲು ತಾತ್ಕಾಲಿಕ ಸಿಬ್ಬಂದಿಗಳು ಪ್ರಾಮಾಣಿಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕ್ರುಗರ ಪೌಂಡೇಶನನಿಂದ ಇದುವರೆಗೆ ಸಹಾಯ ಪಡೆದ ಫಲಾನುಭವಿಗಳ ಸಂಖ್ಯೆ ಹಾಗೂ ನೀಡಿದ ಸಹಾಯಧನದ ವಿವರ ಈ ಕೆಳಗಿನಂತೆ ಇದೆ.

| ವರ್ಷ | ಫಲಾನುಭವಿಗಳ ಸಂಖ್ಯೆ | ಕ್ರುಗರ ಫೌಂಡೇಶನ ನೀಡಿದ ಸಹಾಯ ಧನ | ತಾತ್ಕಾಲಿಕ ಶಿಕ್ಷಕರಿಗೆ ನೀಡಿದ ಒಟ್ಟು ಸಂಭಾವನೆ |
|---|---|---|---|
| 2006–2007 | 86 | 3,00,000 | 2,64,500 |
| 2007–2008 | 88 | 3,50,000 | 3,81,500 |
| 2008–2009 | 90 | 4,00,000 | 3,84,000 |
| 2009–2010 | 79 | 3,50,000 | 3,39,500 |
| 2010–2011 | 78 | 5,00,000 | 5,33,500 |
| **ಒಟ್ಟು** | **421** | **19,00,000** | **19,03,000** |




ಈ ಯೋಜನೆಯಿಂದ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ಪ್ರಯೋಜನವಾಗುವದರ ಜೊತೆಗೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುವ ಶಿಕ್ಷಕರಿಗೂ ಕೆಲಸ ನಿರ್ವಹಿಸಲು ಉತ್ತೇಜನ ನೀಡಿದಂತಾಗಿದೆ. ಈ ಯೋಜನೆಗೆ ಕ್ರುಗರ್ ಫೌಂಡೇಶನ್ ಕಾರವಾರ ಇಲ್ಲಿಯವರೆಗೆ ರೂ.19,00,000/–

ಸಹಾಯಧನ ನೀಡಿದೆ. ಈ ಬಗ್ಗೆ ಸಂಸ್ಥೆಯ ಅಧ್ಯಕ್ಷರಿಗೂ ಕ್ರುಗರ್ ಫೌಂಡೆಶನ್ ಕಾರವಾರ ಇವರಿಗೂ ಟ್ರಸ್ಟಿನ ಪರವಾಗಿ ಹಾಗೂ ಎಲ್ಲ ಸಂಸ್ಥೆಯ ಪರವಾಗಿ ಧನ್ಯವಾದ ಅರ್ಪಿಸುತ್ತೇನೆ.

2011–2012ನೇ ಶೈಕ್ಷಣಿಕ ವರ್ಷದಲ್ಲಿಯೂ ಈ ಯೋಜನೆ ಮುಂದೆವರೆಸಬೇಕಾಗಿ ಮಾನ್ಯ ಅಧ್ಯಕ್ಷರಿಗೆ ತಮ್ಮೆಲ್ಲರ ಪರವಾಗಿ ವಿನಂತಿಸುತ್ತೇನೆ.

## 16. ಉತ್ತಮ ನಾಳೆಗಾಗಿ ಪರಿವರ್ತನಾಗಾರರು (Project Change Makers for a Better Tomorrow)

ಉತ್ತಮ ನಾಳೆಗಾಗಿ ಪರಿವರ್ತನಾಗಾರರು ಎಂಬ ಸಂಕಲ್ಪದ ಅಡಿಯಲ್ಲಿ ಕಾರವಾರದ ಕ್ರುಗರ ಫೌಂಡೇಶನ ಸಂಸ್ಥೆಯು ಕೆನರಾ ವೆಲ್ ಫೆರ್ ಟ್ರಸ್ಟಿನ ಮೂಲಕ ಕೈಗೆತ್ತಿಕೊಂಡ **"Project Change Makers for a Better Tomorrow"** ಎಂಬ ಒಂದು ವಿನೂತನವಾದ ಯೋಜನೆಯ ಮೊದಲ ಹಂತದ ತರಬೇತಿ ಶಿಬಿರವನ್ನು ಜನವರಿ 2008ರಲ್ಲಿ ಪ್ರಾರಂಭಿಸಿ ಎಪ್ರೀಲ 2010ರಂದು ಯಶಸ್ವಿಯಾಗಿ ಮುಕ್ತಾಯಗೊಳಿಸಿದೆ.

ಈ ಯೋಜನೆಯ ಅಂಗವಾಗಿ ಎಳೆಯ ಮಕ್ಕಳ ಮನಸ್ಸುಗಳಲ್ಲಿ ವಿಶ್ವಾಸಾರ್ಹವಾದಂಥ ಗುಣಮಟ್ಟದ ಬದಲಾವಣೆಯನ್ನು ತರುವದಕ್ಕಾಗಿ ಮತ್ತು ಅವರು ತಮ್ಮ ಮುಂದಿರುವ ಸವಾಲುಗಳನ್ನು ಅವಕಾಶಗಳನ್ನು ಸ್ವೀಕರಿಸಿ ಉತ್ತಮ ನಾಳೆಗಾಗಿ ಪರಿವರ್ತನಾಗಾರರಾಗಿ ರೂಪಾಂತರಗೊಳ್ಳುವಂತೆ ಮಾಡುವ ಉದ್ದೇಶದಿಂದ 3 ವರ್ಷದ ಕಾಲಾವಧಿಯ ಈ ಯೋಜನೆಯನ್ನು ರೂಪಿಸಿ ಮಕ್ಕಳಿಗೆ ತರಬೇತು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಯೋಜನೆಯ ಲಾಭ ಉತ್ತರ ಕನ್ನಡ ಜಿಲ್ಲೆಯ 125 ಮಕ್ಕಳು ಪಡೆದಿರುತ್ತಾರೆ. ಈ ಯೋಜನೆಗೆ ತಗಲಿದ ಒಟ್ಟೂ ವೆಚ್ಚ ರೂ.20,25,000/–. ಈ ಯೋಜನೆಯ ಸಂಪೂರ್ಣ ವೆಚ್ಚವನ್ನು ಕ್ರುಗರ ಫೌಂಡೇಶನ ಕಾರವಾರ ಭರಿಸಿರುತ್ತದೆ. ಈ ಯೋಜನೆ ಯಶಸ್ವಿಗೊಳಿಸುವಲ್ಲಿ ಸಹಕರಿಸಿದ ಎಲ್ಲರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಯೋಜನೆಯನ್ನು ಮುಂದುವರೆಸುವ ನಿರ್ಣಯವನ್ನು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ತೆಗೆದುಕೊಂಡಿರುವದು ಸಂತೋಷದ ವಿಚಾರ. ಅಧ್ಯಕ್ಷರ ಮಾರ್ಗದರ್ಶನದಂತೆ **Project Change Makers for a Better Tomorrow** ಇದರ 2ನೇ ಹಂತದ ತಂಡಕ್ಕೆ ಆಯ್ಕೆಯನ್ನು ವಿವಿಧ ಹಂತಗಳಲ್ಲಿ ಮುಗಿಸಿ, ಅಂತಿಮವಾದ ಆಯ್ಕೆಯನ್ನು ದಿನಾಂಕ 15–09–2010 ರಂದು ಕಾರವಾರದಲ್ಲಿ ನಡೆಸಲಾಗಿದೆ. ಈ ಯೋಜನೆಯಲ್ಲಿ ಪಾಲ್ಗೊಳ್ಳಲು ಜಿಲ್ಲೆಯ ವಿವಿಧ ಶಾಲೆಗಳಲ್ಲಿ ಕಲಿಯುತ್ತಿರುವ 8ನೇ ವರ್ಗದ 50 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

ಎರಡನೇ ಹಂತದ ಈ ಯೋಜನೆಯ ಅಂಗವಾಗಿ ಜಿಲ್ಲೆಯಲ್ಲಿ ವಿವಿದೆಡೆ ಇದುವರೆಗೆ ಒಟ್ಟೂ 3 ತರಬೇತಿ ಶಿಬಿರವನ್ನು ಏರ್ಪಡಿಸಲಾಗಿದೆ.

| | | |
|---|---|---|
| **1ನೇ ಶಿಬಿರ** | **22–10–2010 ರಿಂದ 23–10–2010** | **ಜಿ.ಸಿ.ಕಾಲೇಜ, ಅಂಕೋಲಾ** |
| **2ನೇ ಶಿಬಿರ** | **05–02–2011 ರಿಂದ 07–02–2011** | **ಸಂಸ್ಕೃತ ಪಾಠಶಾಲಾ ಕೆಕ್ಕಾರ, ಕುಮಟಾ** |
| **3ನೇ ಶಿಬಿರ** | **14–05–2011 ರಿಂದ 16–05–2011** | **ಗೋಕುಲ, ಕಾರವಾರ** |

ಈ ಶಿಬಿರದ ಪ್ರಯೋಜನವನ್ನು ಎಲ್ಲ ಫಲಾನುಭವಿಗಳು ಪಡೆಯುತ್ತಿದ್ದಾರೆ. ಸಂಪನ್ಮೂಲ ವ್ಯಕ್ತಿಗಳು ಈ ಶಿಬಿರಗಳನ್ನು ಯಶಸ್ವಿಯಾಗಿ ನಡೆಸಲು ತುಂಬಾ ಸಹಕಾರ ನೀಡುತ್ತಿದ್ದಾರೆ. ಈ ಯೋಜನೆ ಯಶಸ್ವಿಯಾಗಿ ನಡೆಸಲು ಸಹಕರಿಸುತ್ತಿರುವ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

## 17. ಟ್ರಸ್ಟಿಗೆ ಬರುವ ಆದಾಯದ ಕುರಿತು

1. ಟ್ರಸ್ಟು ನಡೆಸುತ್ತಿರುವ ವಿವಿಧ ಸಂಸ್ಥೆಗಳಲ್ಲಿ ಬರುವ ತೋಟದ ಉತ್ಪನ್ನವನ್ನು ಟ್ರಸ್ಟಿಗೆ ಪಾವತಿಸುವಂತೆ ಈ ಹಿಂದಿನ ವರ್ಷಗಳಲ್ಲಿ ವಿನಂತಿಸಲಾಗಿತ್ತು. 2010–2011ನೇ ಸಾಲಿನಲ್ಲಿ 10 ಸಂಸ್ಥೆಗಳಿಂದ ಒಟ್ಟೂ ರೂ.1,10,283/– ತೋಟದ ಉತ್ಪನ್ನ ಬಂದಿರುತ್ತದೆ. ಕಳೆದ ವರ್ಷ ರೂ.85,750/– ಜಮೆ ಆಗಿತ್ತು. ತೋಟದ ಉತ್ಪನ್ನ ಟ್ರಸ್ಟಿಗೆ ಜಮಾ ಮಾಡಿದ ಬಗ್ಗೆ ಸಂಸ್ಥೆಯ ಮುಖ್ಯಸ್ಥರಿಗೆ ಅಭಿನಂದನೆಗಳು.

   ಜನತಾ ವಿದ್ಯಾಲಯ, ಕಡವಾಡ, ಮುದ್ಗಾ, ಶಿರಾಲಿ, ಕುಳವೆ–ಬರೂರ ಮತ್ತು ಎಸ್.ಕೆ.ಪಿ.ಹೈಸ್ಕೂಲ ಕತಗಾಲ ಈ ಶಾಲೆಯಿಂದ ಯಾವದೇ ತೋಟದ ಉತ್ಪನ್ನ ಬಂದಿರುವದಿಲ್ಲ. ಈ ಸಂಸ್ಥೆಯ ಮುಖ್ಯಸ್ಥರು ವಿಶೇಷ ಗಮನ ಹರಿಸಿ ತೋಟವನ್ನು ಅಭಿವೃದ್ಧಿ ಪಡಿಸಿ ತಮ್ಮ ಸಂಸ್ಥೆಯ ತೋಟದ ಉತ್ಪನ್ನ 2011–2012ನೇ ಸಾಲಿನಲ್ಲಿ ಸಾಧ್ಯವಾದಷ್ಟು ಟ್ರಸ್ಟಿಗೆ ಸಂದಾಯ ಮಾಡುವಂತೆ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಎಲ್ಲ ಸಂಸ್ಥೆಗಳು ಈ ಕಾರ್ಯದಲ್ಲಿ ಪಾಲ್ಗೊಳ್ಳಬೇಕೆಂದು ನಮ್ಮ ಇಚ್ಛೆ.

2. ಟ್ರಸ್ಟು ಕಟ್ಟಿಸಿದ ವಸತಿ ಗ್ರಹಗಳು, 1. ಪಿ.ಎಮ್.ಹೈಸ್ಕೂಲ, ಅಂಕೋಲಾ 2) ಜಿ.ಸಿ.ಕಾಲೇಜ, ಅಂಕೋಲಾ 3) ದಿವೇಕರ ವಾಣಿಜ್ಯ ಕಾಲೇಜ, ಕಾರವಾರ 4) ಜನತಾ ವಿದ್ಯಾಲಯ, ದಾಂಡೇಲಿ 5) ಜನತಾ ವಿದ್ಯಾಲಯ, ಕಡತೋಕಾ 6) ಜನತಾ ವಿದ್ಯಾಲಯ, ಶಿರಾಲಿ 7) ಜನತಾ ವಿದ್ಯಾಲಯ, ಮುರ್ಡೇಶ್ವರ ಮತ್ತು 8) ಜನತಾ ವಿದ್ಯಾಲಯ ಕುಳವೆ–ಬರೂರದಲ್ಲಿ ಇದೆ. ಇದರ

ಹೊರತಾಗಿ ಪಿ.ಎಂ.ಹೈಸ್ಕೂಲ ಅಂಕೋಲಾದಲ್ಲಿ ಒಂದು ವಾಣಿಜ್ಯ ಸಂಕೀರ್ಣವಿದೆ. ಹೊನ್ನೆಕೇರಿಯಲ್ಲಿ ಹಾಸ್ಟೇಲ ಕಟ್ಟಡವಿದೆ. ಈ ಎಲ್ಲ ಕಟ್ಟಡದ ಬಾಡಿಗೆ ಹಣ 2010–2011ನೆ ಸಾಲಿನಲ್ಲಿ ಒಟ್ಟೂ ರೂ.3,19,896/– ಬಂದಿರುತ್ತದೆ. ಜನತಾ ವಿದ್ಯಾಲಯ ಮುರ್ಡೇಶ್ವರ ಹಾಗೂ ಕುಳವೆ–ಬರೂರ ಶಾಲೆಯ ವಸತಿಗ್ರಹ ಖಾಲಿ ಇದ್ದು ಅದನ್ನು ಆದಷ್ಟು ಬೇಗನೆ ಅವಶ್ಯವಿರುವ ಸಿಬ್ಬಂದಿಗಳಿಗೆ ನೀಡುವಂತೆ ಮುಖ್ಯಾಧ್ಯಾಪಕರು ಪ್ರಯತ್ನ ಮಾಡಬೇಕು.

ಈ ಎಲ್ಲ ಕಟ್ಟಡಗಳ ರಿಪೇರಿ ಕೆಲಸ, ಸುಣ್ಣಬಣ್ಣ ಮಾಡಿಸುವದು ಹಾಗೂ ಮುನ್ಸಿಪಾಲಿಟಿ/ಪಂಚಾಯತ ಕರವನ್ನು ತುಂಬುವದನ್ನು ಟ್ರಸ್ಟಿನಿಂದಲೇ ಮಾಡುತ್ತಿದ್ದೇವೆ.

3. ಶಾಲಾ ಕಾಲೇಜಿಗೆ ದಾಖಲಾದ ವಿದ್ಯಾರ್ಥಿಗಳಿಂದ ಹಾಗೂ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಯವರಿರಿಂದ ಒಂದು ಶೈಕ್ಷಣಿಕ ವರ್ಷಕ್ಕೆ ರೂ.100/–ನ್ನು ರೂಪೀ ರಿಸರ್ವ ಫಂಡ ಆಗಿ ಸಂಗ್ರಹಿಸಿ, ಟ್ರಸ್ಟಿಗೆ ಜಮಾ ಮಾಡುವದು ಟ್ರಸ್ಟಿನ ಯೋಜನೆಯಲ್ಲೊಂದು. 2010–2011ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಒಟ್ಟೂ ತೂ.9,18,350/– ಸಂಗ್ರಹವಾಗಿದೆ. ಸಂಗ್ರಹಿಸಿದ ಈ ಹಣವನ್ನು ರಿಸರ್ವ ಫಂಡ ಖಾತೆಗೆ ವಿನಿಯೋಗಿಸಬೇಕಾಗುತ್ತದೆ. ಆದರೆ ಶಾಲಾ–ಕಾಲೇಜುಗಳ ನಿರ್ವಹಣೆ ವೆಚ್ಚವಾಗಿ, ಅಭಿವೃದ್ಧಿ ಕಾರ್ಯಕ್ಕೆ, ತಾತ್ಕಾಲಿಕ ಸಿಬ್ಬಂದಿಗಳ ವೇತನಕ್ಕಾಗಿ ಹಾಗೂ ಇನ್ನಿತರ ಕಾರ್ಯಗಳಿಗೆ ಟ್ರಸ್ಟು ಈ ಹಣ ವಿನಿಯೋಗಿಸುವದರಿಂದ ರೂಫಿ ರಿಸರ್ವ ಫಂಡ ನಿಂದ ಸಂಗ್ರಹವಾಗುವ ಹಣ ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಾಗಲಿಲ್ಲ. ಟ್ರಸ್ಟಿಗೆ ಬರುವ ಆದಾಯ, ದೇಣಿಗೆ ಹೆಚ್ಚಾದಲ್ಲಿ ಈ ಹಣವನ್ನು ಪ್ರತ್ಯೇಕ ನಿಧಿಯಾಗಿ ಇಡಲು ಸಾಧ್ಯವಾಗಬಹುದು. ಟ್ರಸ್ಟಿಗೆ ಬರುವ ಆದಾಯ ಇನ್ನೂ ಹೆಚ್ಚಾಗುವಂತೆ ಎಲ್ಲರೂ ಪ್ರಯತ್ನಿಸಬೇಕಾಗಿ ವಿನಂತಿಸುತ್ತೇನೆ.

## 18. ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ

ಟ್ರಸ್ಟಿನ ನಿರ್ದೇಶನದಂತೆ ಈ ವರ್ಷವೂ ಕೂಡಾ ಶೈಕ್ಷಣಿಕ ಪ್ರಗತಿ ಪರಿಶೀಲನಾ ತಂಡವು 01–12–2010 ರಿಂದ 21–12–2010ರವರೆಗೆ 14 ದಿವಸಗಳ ಕಾಲ ಟ್ರಸ್ಟಿನ ವಿವಿಧ ಸಂಸ್ಥೆಗಳಿಗೆ ಭೆಟ್ಟಿ ನೀಡಿ ಎಲ್ಲ ಶಾಲೆಗಳ, ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಶೈಕ್ಷಣಿಕ ಪ್ರಗತಿ ಹಾಗೂ ಲೆಕ್ಕ ಪತ್ರ ಪರಿಶೀಲನಾ ಕಾರ್ಯಕ್ರಮ ನಡೆಸಿರುತ್ತದೆ. ಪದವಿ ಹಾಗೂ ಪದವಿ ಪೂರ್ವ ವಿಭಾಗದ ಲೆಕ್ಕ ಪತ್ರಗಳನ್ನು ಕೂಡಾ ಪರಿಶೀಲಿಸಲಾಗಿದೆ. ಪರಿಶೀಲನಾ ಸಂದರ್ಭದಲ್ಲಿ ಕಂಡುಬಂದ ಕೆಲವು ಅಂಶಗಳನ್ನು ಈ ವರದಿಯಲ್ಲಿ ನೀಡಲಾಗಿದೆ. ಶೈಕ್ಷಣಿಕ ಪರಿಶೀಲನಾ ವರದಿಯನ್ನು ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನೀಡಲಾಗಿದೆ.

ಈ ಪರಿಶೀಲನಾ ತಂಡದಲ್ಲಿ ವಿಷಯ ತಜ್ಞರಾಗಿ ಆಫೀಸ ಹಾಗೂ ಲೆಕ್ಕಪತ್ರ ಪರಿಶೀಲಕರಾಗಿ ಈ ಕೆಳಗಿನವರು ಭಾಗವಹಿಸಿದ್ದರು.

| | | |
|---|---|---|
| 1. | **ಪ್ರೊ. ಜಿ.ವಿ.ಭಟ್ಟ** | ಧರ್ಮದರ್ಶಿಗಳು, ಕೆನರಾ ವೆಲ್‌ಫೆರ್ ಟ್ರಸ್ಟ, ಅಂಕೋಲಾ |
| 2. | **ಪ್ರೊ. ಎಮ್.ಎಸ್.ಹಬ್ಬು** | ನಿವೃತ್ತ ಪ್ರಾಚಾರ್ಯರು |
| 3. | **ಶ್ರೀ ವಿಷ್ಣು ಎನ್.ನಾಯ್ಕ** | ನಿವೃತ್ತ ಪ್ರಾಚಾರ್ಯರು |
| 4. | **ಶ್ರೀ ರವೀಂದ್ರ ವಿ.ಕೇಣಿ** | ಪ್ರಾಚಾರ್ಯರು, ಪಿ.ಎಂ.ಸಂ.ಪ.ಪೂ.ಕಾಲೇಜ, ಅಂಕೋಲಾ |
| 5. | **ಶ್ರೀ ಡಿ.ಪಿ.ಕುಚಿನಾಡ** | ಪ್ರಾಚಾರ್ಯರು, ಜಿ.ಸಿ.ಪ.ಪೂ.ಕಾಲೇಜ, ಅಂಕೋಲಾ |
| 6. | **ಶ್ರೀ ಮಂಜು ಎಮ್.ಪಾಟೀಲ** | ಉಪನ್ಯಾಸಕರು, ಜಿ.ಸಿ.ಪದವಿ ಕಾಲೇಜ, ಅಂಕೋಲಾ |
| 7. | **ಶ್ರೀ ಶಿವಾನಂದ ಎಸ್.ಶೆಟ್ಟಿ** | ನಿವೃತ್ತ ವಿಜ್ಞಾನ ಶಿಕ್ಷಕರು |
| 8. | **ಶ್ರೀ ಎಸ್.ವಿ.ಮುಳಗುಂದ** | ಹಿರಿಯ ಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 9. | **ಶ್ರೀ ವಿ.ಟಿ.ಗೌಡ** | ಹಿರಿಯ ಶಿಕ್ಷಕರು, ಪಿ.ಎಂ.ಹೈಸ್ಕೂಲ, ಅಂಕೋಲಾ |
| 10. | **ಶ್ರೀಮತಿ ಅಶ್ಮಿಕ ಹೆಗಡೆ** | ಉಪನ್ಯಾಸಕರು, ಬಿ.ಎಡ್.ಕಾಲೇಜ, ದಾಂಡೇಲಿ |
| 11. | **ಶ್ರೀ ಪ್ರಕಾಶ ಎಸ್.ಎಸ್.** | ಉಪನ್ಯಾಸಕರು, ಬಿ.ಎಡ್.ಕಾಲೇಜ, ದಾಂಡೇಲಿ |
| 12. | **ಶ್ರೀ ಪ್ರಶಾಂತ ಎನ್.ರಾವ** | ಸ್ಪೇಷಲ್ ಕೋ–ಆರ್ಡಿನೇಟರ, ಕೆನರಾ ವೆಲ್‌ಫೆರ್ ಟ್ರಸ್ಟ |
| 13. | **ಶ್ರೀ ಕೃಷ್ಣಾನಂದ ವಿ.ಶೆಟ್ಟಿ** | ಆಡಳಿತಾಧಿಕಾರಿ, ಕೆನರಾ ವೆಲ್‌ಫೆರ್ ಟ್ರಸ್ಟ, ಅಂಕೋಲಾ |

ಇವರೆಲ್ಲರ ಸಹಕಾರದಿಂದ ಟ್ರಸ್ಟಿನ ಎಲ್ಲ ಶಾಲೆಗಳ ಪ್ರಗತಿ ಪರಿಶೀಲನಾ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಲಾಯಿತು. ಪ್ರತಿಯೊಂದು ಶಾಲೆಯ ಶೈಕ್ಷಣಿಕ ಪ್ರಗತಿ ಪರಿಶೀಲಿಸಿ, ಅಲ್ಲಿಯ ಕುಂದುಕೊರತೆಗಳನ್ನು ಶಿಕ್ಷಕರ ಸಮಕ್ಷಮ ಚರ್ಚಿಸಲಾಯಿತು. ಬಹುತೇಕ ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ವಾತಾವರಣ ಚೆನ್ನಾಗಿರುವದಾಗಿ ಪರಿಶೀಲನಾ ಸಮಿತಿ ಅಭಿಪ್ರಾಯ ಪಟ್ಟಿದೆ. ಶೈಕ್ಷಣಿಕ ವಾತಾವರಣ ಇನ್ನೂ ಹೆಚ್ಚು ಪರಿಣಾಮಕಾರಿಯಾಗುವ ದಿಶೆಯಲ್ಲಿ ಅನೇಕ ಸಲಹೆ ಸೂಚನೆಗಳನ್ನು ವರದಿಯಲ್ಲಿ ನೀಡಲಾಗಿದೆ. 2010–2011ನೇ ಸಾಲಿನ ಪರಿಶೀಲನಾ ವರದಿಯನ್ನು ಆಯಾ ಸಂಸ್ಥೆಯ ಮುಖ್ಯಸ್ಥರಿಗೆ ನೀಡಲಾಗಿದೆ.

## 19. ಆಫೀಸ ಹಾಗೂ ಲೆಕ್ಕ ಪತ್ರ ನಿರ್ವಹಣೆ ಕುರಿತು ಪರಿಶೀಲನೆಯ ವರದಿ

2010–2011ನೇ ಸಾಲಿನ ಶೈಕ್ಷಣಿಕ ಪ್ರಗತಿ ಪರಿಶೀಲನಾ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲ ಕಾಲೇಜ್, ಜ್ಯೂನಿಯರ್ ಕಾಲೇಜ್ ಹಾಗೂ ಹೈಸ್ಕೂಲಿನ ಆಫೀಸ ಕಾರ್ಯನಿರ್ವಹಣೆ ಹಾಗೂ ಲೆಕ್ಕ ಪತ್ರದ

ಪರಿಶೀಲನೆಯನ್ನು ಕೈಗೊಳ್ಳಲಾಗಿದೆ. ಈ ಪರಿಶೀಲನೆ ಸಂದರ್ಭದಲ್ಲಿ ಕಂಡುಬಂದ ಲೋಪದೋಷಗಳನ್ನು ಈ ಕೆಳಗೆ ನೀಡಲಾಗಿದೆ.

1. ಹೈಸ್ಕೂಲಗಳಲ್ಲಿ, ಪದವಿ ಪೂರ್ವ ಕಾಲೇಜುಗಳಲ್ಲಿ ಹಾಗೂ ಪದವಿ ಕಾಲೇಜುಗಳಲ್ಲಿ ಮುಖ್ಯವಾಗಿ ಈ ಕೆಳಗೆ ನಮೂದಿಸಿದ 3 ಲೆಕ್ಕವನ್ನು ಪ್ರತ್ಯೇಕವಾಗಿ ನಿರ್ವಹಿಸಲಾಗಿದೆ.
   - Govt. A/c Book
   - Non-Govt. A/c Book
   - Management A/c Book
   - ಲೆಕ್ಕಪತ್ರ ನಿರ್ವಹಣೆಯ ಸಿಬ್ಬಂದಿಯು ಪ್ರತಿಯೊಂದು ಲೆಕ್ಕದ ವ್ಯವಹಾರವನ್ನು ಆಯಾ ದಿವಸವೇ ಬರೆದು ಅಂತಿಮ ಶಿಲ್ಕು ದಾಖಲಿಸಿದ ನಂತರ ಸಂಸ್ಥೆಯ ಮುಖ್ಯಸ್ಥರು ಅದನ್ನು ಪರಿಶೀಲಿಸಿ ಸಹಿ ಮಾಡುವದು ಕಡ್ಡಾಯ
   - ಪ್ರತಿ ತಿಂಗಳು ತಪ್ಪದೆ ಪ್ರತಿಯೊಂದು ಲೆಕ್ಕದ ಜಮಾ–ಖರ್ಚು ಪತ್ರಿಕೆ ತಯಾರಿಸಬೇಕು ಹಾಗೂ ಆಡಳಿತ ಮಂಡಳಿಯ ಲೆಕ್ಕದ ಖಾತೆಯ ಜಮಾ–ಖರ್ಚಿನ ಪತ್ರಿಕೆಯ ಪ್ರತಿಯನ್ನು ಟ್ರಸ್ಟಿಗೆ ನಿಯಮಿತವಾಗಿ ಸಲ್ಲಿಸಬೇಕು.
   - ಈ ವಿಷಯವನ್ನು ಸಂಸ್ಥೆಯ ಎಲ್ಲ ಮುಖ್ಯಸ್ಥರೊಂದಿಗೆ ಹಾಗೂ ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿಯವರೊಡನೆ ಚರ್ಚಿಸಿ ಸಲಹೆ ಸೂಚನೆ ನೀಡಲಾಗಿದೆ.
2. ಲೈಬ್ರರಿ ಪುಸ್ತಕದ ಸ್ಟಾಕ್ ರಜಿಸ್ಟರ್‌ನ್ನು ಸರಿಯಾಗಿ ನಿರ್ವಹಿಸಿ ಪ್ರತಿ ವರ್ಷದ ಕೊನೆಯಲ್ಲಿ ಪುಸ್ತಕಗಳ ಪರಿಶೀಲನೆ ನಡೆಸಿ ಕಳೆದುಹೋದ ಇಲ್ಲವೇ ಹಾಳಾದ ಪುಸ್ತಕಗಳ ಪಟ್ಟಿ ಮಾಡಿ ಅದನ್ನು ಸಂಬಂಧಿಸಿದ ಇಲಾಖೆಯಿಂದ / ಆಡಳಿತ ಮಂಡಳಿಯಿಂದ ಮಂಜೂರಿ ಪಡೆದು ಸ್ಟಾಕಿನಲ್ಲಿ ಅಷ್ಟು ಪುಸ್ತಕವನ್ನು ಕಡಿಮೆ ಮಾಡಬೇಕು. ಇದನ್ನು ಅನೇಕ ಕಡೆ ಸರಿಯಾಗಿ ನಿರ್ವಹಿಸಿದ್ದು ಕಂಡುಬರಲಿಲ್ಲ. ಈ ಬಗ್ಗೆ ಹಿಂದಿನ ವರ್ಷದ ವರದಿಯಲ್ಲಿ ತಿಳಿಸಲಾಗಿತ್ತು. ಪುಸ್ತಕದ ಸ್ಟಾಕ್ ರಜಿಸ್ಟರನ್ನು ಹಾಗೂ ಇನ್ನಿತರ ದಾಖಲೆಗಳನ್ನು ಸರಿಯಾಗಿ ನಿರ್ವಹಿಸಬೇಕು.
3. ಶಾಲೆ / ಕಾಲೇಜಿನ ಹೆಸರಿಗೆ ಮಂಜೂರಾದ ಜಾಗೆಯ ರಿಕಾರ್ಡನ್ನು ಪ್ರತಿ ವರ್ಷ ಸಂಬಂಧಿಸಿದ ತಹಶೀಲದಾರರಿಂದ ಪಡೆಯಬೇಕು. ಲೀಜ್ ಮೇಲೆ ಮಂಜೂರಾದ ಜಾಗೆಯ ಕುರಿತು, ಲೀಜ್ ಅವಧಿ ಮುಗಿಯುವ ಸಾಕಷ್ಟು ಪೂರ್ವದಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ಲೀಜ್ ಅವಧಿಯನ್ನು ವಿಸ್ತರಿಸಿಕೊಳ್ಳಬೇಕು ಹಾಗೂ ಆ ಬಗ್ಗೆ ಟ್ರಸ್ಟಿಗೆ ಕಾಲಕಾಲಕ್ಕೆ ಮಾಹಿತಿ ಸಲ್ಲಿಸಬೇಕು. ಯಾವದೇ ಕಾರಣಕ್ಕೂ ಈ ವಿಷಯದಲ್ಲಿ ವಿಳಂಬ ಮಾಡಬಾರದು. ಪ್ರತಿ ವರ್ಷ ಶೈಕ್ಷಣಿಕ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಸಂಸ್ಥೆಯ ಜಾಗದ ಹೊಸ ರಿಕಾರ್ಡ ನೀಡಬೇಕು.

4. Kruger Foundation ನಿಂದ ಮಂಜೂರಾದ ಹಣವನ್ನು ಟ್ರಸ್ಟಿನ ವಿವಿಧ ಮಾಧ್ಯಮಿಕ ಶಾಲೆಗಳಲ್ಲಿ ತಾತ್ಕಾಲಿಕವಾಗಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಿಗೆ ಪ್ರತಿ ತಿಂಗಳು ರೂ.1000/– ರಂತೆ ನೀಡಲು ಸಂಸ್ಥೆಯ ಅಧ್ಯಕ್ಷರು ತಿಳಿಸಿದಂತೆ ಸಂಸ್ಥೆಗೆ ಹಣ ನೀಡಲಾಗಿದೆ. ಟ್ರಸ್ಟಿನ ವಿವಿಧ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿರುವ ತಾತ್ಕಾಲಿಕ ಶಿಕ್ಷಕರು ತಮ್ಮ ಬಿಡುವಿನ ಅವಧಿಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಅವರ ಶಿಕ್ಷಣ ಮಟ್ಟ ಸುಧಾರಿಸುವಂತೆ ವಿಶೇಷ ಪ್ರಯತ್ನ ಮಾಡಬೇಕು. ಈ ಕುರಿತು ದಾಖಲೆಯನ್ನು ಇಡಬೇಕು. ಶಾಲೆಯ ಮುಖ್ಯಾಧ್ಯಾಪಕರು ಈ ಬಗ್ಗೆ ಗಮನ ಹರಿಸಿ ಅಭ್ಯಾಸದಲ್ಲಿ ಹಿಂದುಳಿದ ಮಕ್ಕಳಿಗೆ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುವ ಶಿಕ್ಷಕರು ವಿಶೇಷ ತರಬೇತಿ ಸರಿಯಾಗಿ ನೀಡುತ್ತಿರುವದನ್ನು ಪರಿಶೀಲಿಸಿ ಧೃಢೀಕರಿಸಿಕೊಳ್ಳಬೇಕು. ಈ ಕಲಸ ಸರಿಯಾಗಿ ನಿರ್ವಹಿಸುವವರಿಗೆ ಮಾತ್ರ ಈ ಸಹಾಯಧನ ನೀಡಬೇಕು.
5. ಈ ಯೋಜನೆಯಿಂದ ಶೈಕ್ಷಣಿಕವಾಗಿ ಹಿಂದುಳಿದ ಮಕ್ಕಳ ಪ್ರಗತಿಗೆ ಸಹಾಯಕಾರಿಯಾಗಿದೆ ಎಂಬುದು ಪರಿಶೀಲನಾ ಸಮಿತಿಯ ಅಭಿಪ್ರಾಯವಾಗಿದೆ. ಈ ಯೋಜನೆಯನ್ನು ಈ ವರ್ಷವೂ ಮುಂದುವರೆಸಿದ ಬಗ್ಗೆ Kruger Foundation ಸಂಸ್ಥೆಗೆ ಹಾಗೂ ಅಧ್ಯಕ್ಷರಿಗೆ ಧನ್ಯವಾದವನ್ನು ಸಲ್ಲಿಸುತ್ತೇವೆ. ಈ ಯೋಜನೆಯ ಲಾಭ ಎಲ್ಲ ಅರ್ಹ ಮಕ್ಕಳಿಗೆ ಲಭಿಸುವಲ್ಲಿ ಸಂಸ್ಥೆಯ ಮುಖ್ಯಸ್ಥರು ವಿಶೇಷ ಗಮನ ನೀಡುವ ಅವಶ್ಯಕತೆ ಇದೆ.
6. ಸಿಬ್ಬಂದಿಗಳ ಸೇವಾ ಪುಸ್ತಕದಲ್ಲಿ ಅವರು ಪಡೆದ ರಜೆಯ ವಿವರಗಳನ್ನು ಸರಿಯಾಗಿ ನಮೂದಿಸಬೇಕು. ವಾರ್ಷಿಕ ಮುಂಭಡ್ತಿ ಹಾಗು ಇನ್ನಿತರ ಸೇವಾ ಭಡ್ತಿಗಳನ್ನು ಕಾಲಕಾಲಕ್ಕೆ ಸರಿಯಾಗಿ ಸೇವಾ ಪುಸ್ತಕದಲ್ಲಿ ನಮೂದಿಸಿ, ಸಂಸ್ಥೆಯ ಮುಖ್ಯಸ್ಥರು ದೃಢೀಕರಿಸಬೇಕು.
7. ಶಾಲಾ / ಕಾಲೇಜಿನ ಮುಖ್ಯಸ್ಥರು ರಜೆಯ ಮೇಲೆ ಹೋಗುವ ಪೂರ್ವದಲ್ಲಿ ತಮ್ಮ ರಜೆಯ ಅರ್ಜಿಯನ್ನು ಟ್ರಸ್ಟಿನ ಕಾರ್ಯಾಲಯಕ್ಕೆ ಸಾಕಷ್ಟು ಮುಂಚಿತವಾಗಿ ಕಳುಹಿಸಬೇಕು. ಹಾಗೂ ತಮ್ಮ ಸಂಸ್ಥೆಯ ಹಿರಿಯ ಸಹೋದ್ಯೋಗಿಯವರಿಗೆ ತಮ್ಮ ರಜಾ ಅವಧಿಯಲ್ಲಿ In-charge ಆಗಿ ಕಾರ್ಯನಿರ್ವಹಿಸುವಂತೆ ಲಿಖಿತವಾಗಿ ತಿಳಿಸಬೇಕು. ವಾರ್ಷಿಕ ತಪಾಸಣಾ ಸಂದರ್ಭದಲ್ಲಿ ಒಂದೆರಡು ಸಂಸ್ಥೆಗಳು ಇದನ್ನು ಪಾಲಿಸದೇ ಇರುವದು ಗಮನಕ್ಕೆ ಬಂದಿರುತ್ತದೆ. ಅವರಿಗೆ ಈ ಹಿಂದೆಯೂ ಕೂಡಾ ಸೂಚನೆ ನೀಡಲಾಗಿತ್ತು. ಈ ಕುರಿತು ಸುತ್ತೋಲೆಯನ್ನು ಕೂಡಾ ಹೊರಡಿಸಲಾಗಿದೆ. ಸಂಸ್ಥೆಯ ಮುಖ್ಯಸ್ಥರು ತಮ್ಮ ರಜೆಯ ಅರ್ಜಿಯನ್ನು ಮುಂಚಿತವಾಗಿ ಮಂಜೂರಿ ಮಾಡಿಸಿಕೊಳ್ಳದೆ ಇರುವದು ತಮ್ಮ ರಜಾ ಅವಧಿಯಲ್ಲಿ In-charge ವ್ಯವಸ್ಥೆ ಮಾಡದೆ ಇರುವದು ಕಂಡುಬಂದಿದೆ. ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಮ್ಮ ರಜೆ ಅರ್ಜಿಯನ್ನು ಟ್ರಸ್ಟಿಗೆ ಸಲ್ಲಿಸಿ ಮುಂಚಿತವಾಗಿ ಮಂಜೂರಿ ಮಾಡಿಸಿಕೊಳ್ಳುವಂತೆ ಇನ್ನೊಮ್ಮೆ ತಿಳಿಸಲಾಗಿದೆ.

8. ಕೆಲವು ಶಾಲಾ/ಕಾಲೇಜುಗಳಲ್ಲಿ ಸಿಬ್ಬಂದಿಗಳ ಹಾಜರಿ ಪುಸ್ತಕದ ಮೇಲೆ ಮುಂಜಾನೆ ಹಾಗೂ ಮದ್ಯಾಹ್ನ ಪ್ರತ್ಯೇಕವಾಗಿ ಸಹಿ ಮಾಡುವ ಬದಲು ಮುಂಜಾನೆ ಬಂದಾಗಲೇ ಎರಡು ಸಹಿ ಮಾಡಿರುವದು ಕಂಡು ಬಂದಿದೆ. ಇದು ಸರಿಯಾದ ಕ್ರಮವಲ್ಲ. ಈ ಬಗ್ಗೆ ಸಂಬಂಧಿಸಿದ ಮುಖ್ಯಸ್ಥರಿಗೆ ತಿಳಿಸಲಾಗಿದೆ.

## 20. ಸಾಮಾನ್ಯ ಸೂಚನೆಗಳು

1. ಶಾಲಾ ಅಭಿವೃದ್ಧಿ ಕೆಲಸ ನಿರ್ವಹಿಸುವಾಗ ಇಲ್ಲವೆ ಲೈಬ್ರರಿ/ಲೆಬೊರೆಟರಿ/ಸ್ಪೋರ್ಟ್ಸ್/ಪುಸ್ತಕ/ ಸಲಕರಣೆ ಇತ್ಯಾದಿ ಖರೀದಿಸುವ ಸಂದರ್ಭದಲ್ಲಿ ಪ್ರತಿವರ್ಷ ಶೈಕ್ಷಣಿಕ ವರ್ಷ ಪ್ರಾರಂಭವಾದ ಕೂಡಲೆ ಈ ಕೆಳಗೆ ನಮೂದಿಸಿದವರ ಒಂದು ಉಪಸಮಿತಿ ನೇಮಿಸಿಕೊಂಡು ಕಾರ್ಯ ನಿರ್ವಹಿಸಲು ಸೂಚಿಸಲಾಗಿದೆ. ಕಾಲಕಾಲಕ್ಕೆ ಈ ಸಮಿತಿಯು ಅಭಿವೃದ್ಧಿ ಕಾರ್ಯದ ಜೊತೆಗೆ ಅದರ ಮೇಲ್ವಿಚಾರಣೆ ಕೂಡಾ ನಡೆಸುತ್ತಿರಬೇಕು ಈ ಉಪಸಮಿತಿಯಲ್ಲಿ –

   - ಸಂಸ್ಥೆಯ ಮುಖ್ಯಸ್ಥರು
   - ಹಿರಿಯ ಅಧ್ಯಾಪಕರು
   - ಸ್ಟಾಫ್ ಕೌನ್ಸಿಲ ಕಾರ್ಯದರ್ಶಿ ಹಾಗೂ
   - ಆಫೀಸನಲ್ಲಿ ಕಾರ್ಯ ನಿರ್ವಹಿಸುವ ಹಿರಿಯ ಸಿಬ್ಬಂದಿ ಇರಬೇಕು

   ಈ ಉಪಸಮಿತಿ ಕಾಲಕಾಲಕ್ಕೆ ಸಭೆ ಸೇರಿ ಅಭಿವೃದ್ಧಿ ಕೆಲಸದ ಬಗ್ಗೆ ಇಲ್ಲವೆ ಸಲಕರಣೆ ಖರೀದಿಸುವ ಕುರಿತು ನಿರ್ಣಯ ತೆಗೆದುಕೊಂಡು ಕಾರ್ಯ ನಿರ್ವಹಿಸಿದರೆ ಹಾಗೂ ಹಣ ಪಾವತಿಸುವಾಗಲೂ ಈ ಸಮಿತಿಯ ಒಪ್ಪಿಗೆ ಪಡೆದು ಹಣ ಪಾವತಿಸಿದರೆ ಸಂಸ್ಥೆಯಲ್ಲಿ ಇನ್ನೂ ಹೆಚ್ಚಿನ ಪಾರದರ್ಶಕತೆ ಕಾಣಬಹುದು. ಈ ಬಗ್ಗೆ ಕಳೆದ ವರ್ಷದ ವರದಿಯಲ್ಲಿ ನಮೂದಿಸಲಾಗಿತ್ತು. ಆದರೆ ಕೆಲವು ಸಂಸ್ಥೆಗಳ ಮುಖ್ಯಸ್ಥರು ಇದನ್ನು ಕಾರ್ಯರೂಪಕ್ಕೆ ತಂದಿರುವದಿಲ್ಲ. ಕಡ್ಡಾಯವಾಗಿ ಈ ನಿಯಮ ಪಾಲಿಸಬೇಕು.

2. ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಬರುವ ಸ್ಕಾಲರಶಿಪ್ / ವಿದ್ಯಾರ್ಥಿ ವೇತನ ಇತ್ಯಾದಿ ಹಣವನ್ನು ವಿದ್ಯಾರ್ಥಿಗಳಿಗೆ ಚೆಕ್ ಮೂಲಕ ಆಯಾ ವರ್ಷವೇ ಪಾವತಿಸಬೇಕು.

3. ಶಾಲಾ / ಕಾಲೇಜುಗಳು ನಿರ್ವಹಿಸುತ್ತಿರುವ ಲೆಕ್ಕಪತ್ರದ ಖಾತೆಯಲ್ಲಿ ಕೈಶಿಲ್ಕು ನಿಗದಿಗೊಳಿಸಿದ ಮಿತಿಗಿಂತ ಹೆಚ್ಚಿಗೆ ಇಟ್ಟುಕೊಳ್ಳಬಾರದೆಂದು ಈ ಹಿಂದಿನ ವರದಿಯಲ್ಲಿ ಸೂಚಿಸಲಾಗಿತ್ತು. ಆದರೂ ಕೂಡ ಕೆಲವು ಸಂಸ್ಥೆಗಳು ಇದನ್ನು ಪಾಲಿಸದೇ ಇರುವದು ಪರಿಶೀಲನೆ ವೇಳೆ ಗಮನಕ್ಕೆ ಬಂದಿದೆ. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಲಾಗಿದೆ.

4. ಹೈಸ್ಕೂಲ ವಿಭಾಗಕ್ಕೆ ಶಿಕ್ಷಣ ಇಲಾಖೆಯವರು ನಿಗದಿಪಡಿಸಿದ ಗರಿಷ್ಠ ಸಂಖ್ಯೆಗೆ ಅನುಗುಣವಾಗಿ ತರಗತಿಗಳನ್ನು ನಡೆಸಬೇಕಾಗುತ್ತದೆ. ಸರ್ಕಾರ ನಿಗದಿಪಡಿಸಿದ ಸಂಖ್ಯೆಗಿಂತ ಕಡಿಮೆ ವಿದ್ಯಾರ್ಥಿಗಳನ್ನು ಇಟ್ಟುಕೊಂಡು ಹೆಚ್ಚು ವರ್ಗಗಳನ್ನು ಮಾಡಿ ತರಗತಿ ನಡೆಸುತ್ತಿರುವದು ಶೈಕ್ಷಣಿಕ ಪರಿಶೀಲನಾ ಸಂದರ್ಭದಲ್ಲಿ ಗಮನಕ್ಕೆ ಬಂದಿದೆ. 2011–12ನೇ ಸಾಲಿನಿಂದ ಸರ್ಕಾರ ನಿಗದಿಪಡಿಸಿದ ಸಂಖ್ಯೆಗೆ ಅನುಗುಣವಾಗಿ ತರಗತಿಗಳನ್ನು ಮಾಡಲು ಸಂಬಂಧಿಸಿದ ಪ್ರಾಚಾರ್ಯರಿಗೆ / ಮುಖ್ಯಾಧ್ಯಾಪಕರಿಗೆ ಸೂಚಿಸಲಾಗಿದೆ. ಇದನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಅನುಮೋದಿತ ಶಿಕ್ಷಕರಿಗೆ ಇಲಾಖೆ ನಿಗದಿಪಡಿಸಿದ ಕಾರ್ಯಭಾರವನ್ನು ನೀಡಬೇಕು. ಹಾಗೂ ಮುಖ್ಯಾಧ್ಯಾಪಕರು/ಪ್ರಾಚಾರ್ಯರು ಇಲಾಖಾ ನಿಗದಿಪಡಿಸಿದ ಕಾರ್ಯಭಾರವನ್ನು ತಪ್ಪದೆ ತೆಗೆದುಕೊಳ್ಳಬೇಕು.
5. ಟ್ರಸ್ಟಿನ ಶಾಲಾ/ಕಾಲೇಜುಗಳ ಮುಖ್ಯಸ್ಥರು ಅನಿವಾರ್ಯ ಪ್ರಸಂಗದಲ್ಲಿ ಶಾಲಾ/ಕಾಲೇಜಿಗೆ ಸಂಬಂಧಪಟ್ಟ ಯಾವದಾದರೂ ಉದ್ದೇಶಕ್ಕಾಗಿ ಮುಂಗಡ ಹಣ ಪಡೆದಿದ್ದರೆ, ಅದರ ಲೆಕ್ಕವನ್ನು ಒಂದು ವಾರದ ಒಳಗೆ ಮುಕ್ತಾಯಗೊಳಿಸಬೇಕು
6. ಶಾಲಾ/ಕಾಲೇಜಿನಿಂದ ಇಲ್ಲವೇ ಆಡಳಿತ ಮಂಡಳಿ ವತಿಯಿಂದ ನೀಡುವ ರಸೀದಿಗಳ ಮೇಲೆ ಕೆಲವು ಸಂಸ್ಥೆಗಳಲ್ಲಿ ಸಹಿ ಮಾಡದೆ ರಸೀದಿ ನೀಡುತ್ತಿರುವದು ಪರಿಶೀಲನೆ ವೇಳೆ ಕಂಡು ಬಂದಿದೆ. ಯಾವದೇ ರಸೀದಿಯನ್ನು ಸಹಿ ಇಲ್ಲದೇ ನೀಡಬಾರದು. ಈ ಕುರಿತು ಕಳೆದ ಸಾಲಿನ ವರದಿಯಲ್ಲೂ ತಿಳಿಸಲಾಗಿತ್ತು.
7. ಶಾಲಾ/ಕಾಲೇಜು ವತಿಯಿಂದ ಪಾವತಿಸಿದ ಹಣಕ್ಕೆ ರಸೀದಿ ಮತ್ತು ಬಿಲ್ಲು / ವಿವರಣೆ ಪತ್ರ ಸರಿಯಾಗಿ ಇಟ್ಟಿದ್ದು ಕೆಲವು ಸಂಸ್ಥೆಗಳಲ್ಲಿ ಕಂಡು ಬಂದಿರುವದಿಲ್ಲ. ಪ್ರತಿಯೊಂದು ಬಿಲ್ಲಿನ ಹಣವನ್ನು ನಿಯಮದ ಪ್ರಕಾರ ಪಾವತಿಸಿ ಸರಿಯಾದ ಓಚರನ್ನು ಇಡಬೇಕು ಪ್ರತಿಯೊಂದು ಬಿಲ್ಲು ಪಾವತಿಸಿದ ಕೂಡಲೆ ಅದರ ಮೇಲೆ Head of Account ಕಡ್ಡಾಯವಾಗಿ ನಮೂದಿಸಬೇಕು.
8. ಕೆನರಾ ವೆಲ್‌ಫೇರ್ ಟ್ರಸ್ಟಿಗೆ ನೀಡುವ ದೇಣಿಗೆಗೆ ಸೆಕ್ಷನ 80G ಪ್ರಕಾರ ಆದಾಯಕರ ವಿನಾಯ್ತಿಯನ್ನು, ಆದಾಯಕರ ಇಲಾಖೆಯವರು ನೀಡುತ್ತಿದ್ದು, ಅದರ ಅವಧಿ 31–03–2011ಕ್ಕೆ ಮುಕ್ತಾಯಗೊಂಡಿತ್ತು. ಸೆಕ್ಷನ 80G ಪ್ರಕಾರ ನೀಡುವ ವಿನಾಯ್ತಿಯನ್ನು ಮುಂದುವರೆಸುವ ಬಗ್ಗೆ ಪ್ರಸ್ತಾವನೆಯನ್ನು ಆಯುಕ್ತರು ಆದಾಯಕರ ಇಲಾಖೆ, ಮಂಗಳೂರು ಅವರಿಗೆ ಸಕಾಲದಲ್ಲಿ ಶ್ರೀ ಯು.ಕೆ.ಅಣ್ವೇಕರ, ಚಾರ್ಟರ್ಡ ಅಂಕೌಂಟಂಟ, ಕಾರವಾರ ಇವರ ಮೂಲಕ ಸಲ್ಲಿಸಲಾಗಿತ್ತು. ನಮ್ಮ ಕೋರಿಕೆಯಂತೆ ಮಾನ್ಯ ಆಯುಕ್ತರು, ಆದಾಯಕರ ಇಲಾಖೆ ಮಂಗಳೂರು ಇವರು ದಿನಾಂಕ 03–06–2011 ರಂದು ಆದೇಶ ಹೊರಡಿಸಿ ಸೆಕ್ಷನ 80G ಪ್ರಕಾರ ದೇಣಿಗೆ ಹಣಕ್ಕೆ ನೀಡುವ ವಿನಾಯ್ತಿಯನ್ನು ಮುಂದುವರೆಸಿದ್ದಾರೆ. ಈ ಬಗ್ಗೆ ಇಲಾಖೆಗೆ ಕೃತಜ್ಞತೆ ಸಲ್ಲಿಸುತ್ತೇನೆ.

## 21. ಕೊನೆಯ ಮಾತು ಹಾಗೂ ಉಪಕಾರ ಸ್ಮರಣೆ

ಸಾಮಾನ್ಯವಾಗಿ ಶಾಲೆ–ಕಾಲೇಜುಗಳಲ್ಲಿ ಸಂಬಂಧಪಟ್ಟ ಶಿಕ್ಷಕರ ಗಮನ ಪಠ್ಯಪುಸ್ತಕದಲ್ಲಿರುವ ಪಾಠಗಳನ್ನು ಮುಗಿಸಿದರೆ ವರ್ಷದ ಕರ್ತವ್ಯ ಮುಗಿದಂತೆ ಹಾಗೂ ಪರೀಕ್ಷೆಯ ಪರಿಣಾಮವೇ ಶಿಕ್ಷಣ ಸಂಸ್ಥೆಯ ತರಗತಿಯ ಅಳತೆಗೋಲು ಎಂಬ ಕಲ್ಪನೆಯಿದೆ. ಪಠ್ಯಪುಸ್ತಕದ ಆಚೆಯೂ ಇರುವ ಹೊರಗಿನ ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆ, ರಾಜಕೀಯ ಚಿಂತನೆ (ಅಣಕು ಸಂಸತ್ತಿನ ಮೂಲಕ) ಹಾಗೂ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ ನಮ್ಮ ವಿದ್ಯಾರ್ಥಿಗಳು ಜ್ಞಾನಸಂಪತ್ತನ್ನು ಹೆಚ್ಚಿಸಿಕೊಳ್ಳುವಂಥ ಬಹುಮುಖ ವ್ಯಕ್ತಿತ್ವ ವಿಕಸನ ಶಿಕ್ಷಣ ಪದ್ಧತಿಗೆ ಕೆನರಾ ವೆಲ್‌ಫೇರ್ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳ ಬೋಧಕ ಸಿಬ್ಬಂದಿಗಳು ವಿಶೇಷ ಗಮನ ನೀಡಬೇಕೆಂದು ಪರಿವೀಕ್ಷಣಾ ತಂಡ ಅಭಿಪ್ರಾಯ ಪಡುತ್ತದೆ. ಕ್ರುಗರ್ ಫೌಂಡೇಶನ್ ನೀಡಿದ ಹೆಚ್ಚುವರಿ ಆರ್ಥಿಕ ಸೌಲಭ್ಯ ಪಡೆಯುತ್ತಿರುವ ತಾತ್ಕಾಲಿಕ ಶಿಕ್ಷಕರು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ತೀರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಬಗ್ಗೆ ಆದ್ಯತೆ ಮೇರೆಗೆ ವಿಶೇಷ ಗಮನ ನೀಡಲು ಸೂಚಿಸಿದೆ. ಆಯಾ ಶಾಲೆಯ ಮುಖ್ಯಸ್ಥರು ಈ ಕುರಿತು ಹೆಚ್ಚು ಗಮನ ಹರಿಸಿ ಕ್ರುಗರ ಫೌಂಡೇಶನ್ ನೀಡುತ್ತಿರುವ ಸಹಾಯ ಧನದ ಹಿಂದೆ ಇರುವ ಸಾಮಾಜಿಕ ಕಳಕಳಿ ಸಾರ್ಥಕಗೊಳಿಸಲು ಪ್ರಯತ್ನ ಮಾಡಬೇಕು.

- "ಶಿಕ್ಷಣದ ಮೂಲಕ ಸಾಮಾಜಿಕ ಬದಲಾವಣೆ" ಎಂಬ ಟ್ರಸ್ಟಿನ ನಿಲುವನ್ನು ಮನಸಾ ಸ್ವೀಕರಿಸಿ ಆಯಾ ಭಾಗಗಳಲ್ಲಿ ಟ್ರಸ್ಟಿನ ಶಿಕ್ಷಣ ಸಂಸ್ಥೆಗಳು ಸಮಾಜಸೇವಾ ಕಾರ್ಯಕ್ಕೆ ತಮ್ಮನ್ನು ತೊಡಗಿಸಿಕೊಳ್ಳುವಂತೆ, ಪರಿವೀಕ್ಷಣಾ ತಂಡವು ಸಲಹೆ ಮಾಡುತ್ತದೆ.
- ಪರಿಹಾರ ಬೋಧನಾ ಕಾರ್ಯವನ್ನು ಹೆಚ್ಚು ಸಮರ್ಪಕವಾಗಿ ಎಲ್ಲ ಶಾಲೆಗಳಲ್ಲಿಯೂ ನಿರ್ವಹಿಸುವಂತೆ ಪರಿವೀಕ್ಷಣಾ ತಂಡವು ಸಲಹೆ ಮಾಡುತ್ತದೆ.
- ಪರೀಕ್ಷಾ ಫಲಿತಾಂಶ ಉತ್ತಮ ಪಡಿಸುವದರ ಜೊತೆಗೆ ಪ್ರತಿಭಾವಂತ ವಿದ್ಯಾರ್ಥಿಗಳ ಬಗ್ಗೆಯೂ ಹೆಚ್ಚಿನ ಗಮನ ಹರಿಸಿ ಅವರ ಸಾಧನೆ ರಾಜ್ಯಮಟ್ಟದಲ್ಲಿ ಗುರುತಿಸುವಂತೆ ಪ್ರಾಮಾಣಿಕ ಪ್ರಯತ್ನ ಮಾಡಲು ಸೂಚಿಸಿದೆ.
- ಪಠ್ಯೇತರ ಚಟುವಟಿಕೆಗಳಲ್ಲೂ ಕುಡಾ ವಿಶೇಷ ಗಮನ ಹರಿಸಿ, ಪ್ರತಿಭೆಯುಳ್ಳ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವದು ಅವಶ್ಯವಿದೆ.
- ಒಟ್ಟಾರೆಯಾಗಿ ಶಿಕ್ಷಕರು ತಮ್ಮ ಕ್ರೀಯಾಶೀಲತೆಯನ್ನು ಹೆಚ್ಚಿಸಿಕೊಂಡು, ಸಮಾಜದಲ್ಲಿ ಗೌರವ ಸಂಪಾದಿಸಿಕೊಂಡು, ಶಾಲೆಗೂ ಟ್ರಸ್ಟಿಗೂ ಕೀರ್ತಿ ಬರುವರತೆ ಕಾರ್ಯ ನಿರ್ವಹಿಸಲು ಕೋರಲಾಗಿದೆ.

ಕೆನರಾ ವೆಲ್‌ಫೇರ್ ಟ್ರಸ್ಟು ಎಲ್ಲ ಸಂಸ್ಥೆಗಳ ಶೈಕ್ಷಣಿಕ ಪರಿಶೀಲನೆ ಹಾಗೂ ಲೆಕ್ಕಪತ್ರ ಪರಿಶೀಲನೆ ನಡೆಸುವಂತ ಈ ಒಂದು ಹೊಸ ಯೋಜನೆಯನ್ನು ಕಳೆದ ಕೆಲವು ವರ್ಷಗಳಿಂದ ನಡೆಸುತ್ತ ಬಂದಿದೆ. ಇದರಿಂದ ಶಾಲೆಯ ಶೈಕ್ಷಣಿಕ ಪ್ರಗತಿಗೆ ಹೆಚ್ಚು ಅನುಕೂಲವಾಗುವದರ ಜೊತೆಗೆ ಶಾಲೆಯ ಆಡಳಿತ,

ಲೆಕ್ಕಪತ್ರ ನಿರ್ವಹಣೆಗೆ ಹಾಗೂ ಎದುರಿಸುತ್ತಿರುವ ಅನೇಕ ಸಮಸ್ಯೆಗಳಿಗೆ ಸ್ಥಳದಲ್ಲೆ ಪರಿಹಾರ ದೊರೆಯುವದರಿಂದ ಶಾಲೆಯ ಮುಖ್ಯಾಧ್ಯಾಪಕರಿಗೆ / ಪ್ರಾಚಾರ್ಯರಿಗೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲು ಹಾಗೂ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲು ಸಹಕಾರಿಯಾಗುತ್ತದೆ ಎಂಬುದು ಪರಿಶೀಲನಾ ತಂಡದ ಅನಿಸಿಕೆ. ಸಂಸ್ಥೆಯ ಮುಖ್ಯಸ್ಥರು ವರದಿಯಲ್ಲಿ ನಮೂದಿಸಿದ ನ್ಯೂನತೆಗಳಿಗೆ ಹೆಚ್ಚು ಒತ್ತು ನೀಡಿ ಕಾರ್ಯ ನಿರ್ವಹಿಸಿದರೆ ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚು ಪ್ರಗತಿ ತೋರಿಸಲು ಸಾಧ್ಯವಿದೆ.

- ಮಾನ್ಯ ಟ್ರಸ್ಟಿಗಳಾದ ಪ್ರೊ. ಜಿ.ವಿ.ಭಟ್ಟರವರು ಟ್ರಸ್ಟು ನಡೆಸುತ್ತಿರುವ ಕೆಲವು ಶಾಲಾ ಕಾಲೇಜುಗಳಿಗೆ ಶೈಕ್ಷಣಿಕ ಪ್ರಗತಿ ಪರಿಶೀಲನಾ ತಂಡದ ಜೊತೆಗೆ ಭಾಗವಹಿಸಿ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಪಾಲುಗೊಂಡು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿರುತ್ತಾರೆ, ಅವರಿಗೆ ಧನ್ಯಾವಾದಗಳು.
- 2010–11ನೇ ಸಾಲಿನ ಪ್ರಗತಿ ಪರಿಶೀಲನಾ ಕಾರ್ಯದಲ್ಲಿ ಎಲ್ಲ ವಿಷಯ ತಜ್ಞರು ಸಂಪೂರ್ಣ ಸಹಕಾರ ನೀಡಿ ತಮ್ಮ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ, ಪ್ರತಿಯೊಂದು ಶಾಲೆಯ ಶೈಕ್ಷಣಿಕ ಕಾರ್ಯವನ್ನು ವೀಕ್ಷಿಸಿ ಕೊನೆಯಲ್ಲಿ ತಮ್ಮ ಪ್ರಾಮಾಣಿಕ ಅನಿಸಿಕೆಗಳನ್ನು ಅಧ್ಯಾಪಕರಲ್ಲಿ ಹಾಗೂ ಪರಿಶೀಲನಾ ತಂಡದಲ್ಲಿ ವ್ಯಕ್ತಪಡಿಸಿ, ಮುಂಬರುವ ದಿನಗಳಲ್ಲಿ ಶಾಲೆಗಳ ಪ್ರಗತಿಗಾಗಿ ಹಾಕಿಕೊಳ್ಳಬೇಕಾದ ಕಾರ್ಯಯೋಜನೆ ಕುರಿತು ತಿಳುವಳಿಕೆ ನೀಡಿರುತ್ತಾರೆ. ಈ ಒಂದು ಮಹತ್ವದ ಕಾರ್ಯದಲ್ಲಿ ಪಾಲುಗೊಂಡು ತಮ್ಮ ಅಮೂಲ್ಯವಾದ ವೇಳೆಯನ್ನು ಈ ಕಾರ್ಯಕ್ಕೆ ನೀಡಿದ ಎಲ್ಲರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿ ಬರುವ ವರ್ಷಗಳಲ್ಲಿ ಕೂಡ ಅವರಿಂದ ಇದೇ ರೀತಿಯ ಸಹಕಾರ ನಿರೀಕ್ಷಿಸಲಾಗಿದೆ.
- ಟ್ರಸ್ಟು ನಡೆಸುತ್ತಿರುವ ಶಾಲಾ/ಕಾಲೇಜುಗಳ ಶೈಕ್ಷಣಿಕ ಪರಿಶೀಲನೆ ಹಾಗೂ ಆಫೀಸ ಮತ್ತು ಲೆಕ್ಕಪತ್ರ ನಿರ್ವಹಣೆ ಸಂದರ್ಭದಲ್ಲಿ ಟ್ರಸ್ಟಿನ ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಪಿ.ಕಾಮತರವರು ಶಿರಾಲಿ ಮತ್ತು ಮುರ್ಡೇಶ್ವರ ಶಾಲೆಗೆ ಭೆಟ್ಟಿ ನೀಡಿ ಪರಿಶೀಲನಾ ಕಾರ್ಯದಲ್ಲಿ ಪಾಲ್ಗೊಂಡು ಅಮೂಲ್ಯ ಸಲಹೆ ಸೂಚನೆಗಳನ್ನು ನೀಡಿ ಪ್ರೋತ್ಸಾಹಿಸಿದ್ದಾರೆ. ಅವರಿಗೆ ಹೃತ್ಪೂರ್ವಕ ಧನ್ಯವಾದಗಳು.

ಪ್ರಗತಿ ಪರಿಶೀಲನೆಗಾಗಿ ಭೇಟಿ ನೀಡಿದ ಸಂದರ್ಭದಲ್ಲಿ ಟ್ರಸ್ಟಿನ ಎಲ್ಲ ಶಾಲೆಗಳ/ ಕಾಲೇಜುಗಳ ಮುಖ್ಯಾಧ್ಯಾಪಕರು / ಪ್ರಾಚಾರ್ಯರು ಹಾಗೂ ಅಧ್ಯಾಪಕ ವೃಂದದವರು, ಅಧ್ಯಾಪಕೇತರರು ಸಂಪೂರ್ಣ ಸಹಕಾರ ನೀಡಿದ್ದಾರೆ. ಅವರಿಗೂ ಈ ಸಂದರ್ಭದಲ್ಲಿ ವಂದನೆಗಳನ್ನು ಸಲ್ಲಿಸುತ್ತೇನೆ. ಈ ಪರಿಶೀಲನಾ ಕಾರ್ಯ ನೆರವೇರಿಸಲು ಪ್ರೇರಣೆ ನೀಡಿದ ಟ್ರಸ್ಟಿನ ಅಧ್ಯಕ್ಷರು ಮತ್ತು ಎಲ್ಲ ಧರ್ಮದರ್ಶಿಗಳಿಗೆ ಹೃತ್ಪೂರ್ವಕ ವಂದನೆ ಸಲ್ಲಿಸುತ್ತೇನೆ.

ಪ್ರಗತಿ ಪರಿಶೀಲನಾ ಹಾಗೂ ಲೆಕ್ಕ ಪತ್ರ ತಪಾಸಣಾ ವರದಿಯನ್ನು ಸಂಸ್ಥೆಯ ಎಲ್ಲ ಮುಖ್ಯಸ್ಥರಿಗೆ ನೀಡಲಾಗಿದೆ. ಸಂಸ್ಥೆಯ ಎಲ್ಲ ಮುಖ್ಯಸ್ಥರು ಅದರಲ್ಲಿ ನಮೂದಿಸಿದ ಎಲ್ಲ ಅಂಶಗಳಿಗೆ ಗಮನ ನೀಡಿ ಮುಂಬರುವ ದಿನಗಳಲ್ಲಿ ಎಲ್ಲ ನ್ಯೂನತೆಗಳನ್ನು ಸರಿಪಡಿಸಿಕೊಂಡು ಹೆಚ್ಚಿನ ಪ್ರಗತಿ ಸಾಧಿಸಲು ಈ ಮೂಲಕ ವಿನಂತಿಸಲಾಗಿದೆ.

2010–2011ನೇ ಶೈಕ್ಷಣಿಕ ವರ್ಷದ ಎಲ್ಲ ಶಾಲೆ, ಕಾಲೇಜುಗಳ ಹಾಗೂ ಕೆನರಾ ವೆಲ್‌ಫೆರ್ ಟ್ರಸ್ಟಿನ ಲೆಕ್ಕಪತ್ರವನ್ನು ಲೆಕ್ಕಪರಿಶೋಧಕರಾದ ಶ್ರೀ ಯು.ಕೆ.ಅಣ್ವೇಕರ ಹಾಗೂ ಅವರ ಸಿಬ್ಬಂದಿ ವರ್ಗ ಸಕಾಲದಲ್ಲಿ ಮುಗಿಸಿ ಕೊಟ್ಟಿರುತ್ತಾರೆ. ಅವರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಟ್ರಸ್ಟಿನ ದೈನಂದಿನ ವ್ಯವಹಾರದಲ್ಲಿ, ಅಭಿವೃದ್ಧಿ ಕೆಲಸದಲ್ಲಿ ಲೆಕ್ಕ ಪತ್ರ ನಿರ್ವಹಣೆಯಲ್ಲಿ, ಟ್ರಸ್ಟಿನ ಆಡಳಿತ ನಿರ್ವಹಣೆಯಲ್ಲಿ ಸದಾ ಮಾರ್ಗದರ್ಶನ ನೀಡುತ್ತಿರುವ ಟ್ರಸ್ಟಿನ ಅಧ್ಯಕ್ಷರಾದ ಮಾನ್ಯ ಶ್ರೀ ಎಸ್.ಪಿ.ಕಾಮತರವರಿಗೆ, ಟ್ರಸ್ಟಿಗಳಾದ ಮಾನ್ಯ ಶ್ರೀ ವಾಮನ ಪೈರವರಿಗೆ, ಪ್ರೊ. ಜಿ.ವಿ.ಭಟ್ಟರವರಿಗೆ ಹಾಗೂ ಶ್ರೀಮತಿ ಉಷಾ ಪ್ರಧಾನ ಅವರಿಗೆ ಈ ಸಂದರ್ಭದಲ್ಲಿ ನೆನದು ಅವರಿಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ತಾವೆಲ್ಲರೂ ಮುಕ್ತ ಮನಸ್ಸಿನಿಂದ ಮುಂದೆ ನಡೆಯುವ ಚರ್ಚೆಯಲ್ಲಿ ಭಾಗವಹಿಸಿ ಉಪಯುಕ್ತ ಸಲಹೆ ಸೂಚನೆ ನೀಡಿ ಸಭೆಯಲ್ಲಿ ಒಳ್ಳೆಯ ನಿರ್ಧಾರಗಳನ್ನು ತೆಗೆದುಕೊಳ್ಳಲು ಟ್ರಸ್ಟಿನ ಅಧ್ಯಕ್ಷರಿಗೆ ಸಹಕರಿಸಬೇಕಾಗಿ ವಿನಂತಿಸುತ್ತೇನೆ. ಈ ಒಂದು ಮಹತ್ವಪೂರ್ಣವಾದ ಸಭೆಯಲ್ಲಿ ಪಾಲ್ಗೊಳ್ಳಲು ಆಗಮಿಸಿದ ತಮಗೆಲ್ಲರಿಗೆ ಇನ್ನೊಮ್ಮೆ ಹೃತ್ಪೂರ್ವಕವಾಗಿ ಸ್ವಾಗತಿಸಿ ನನ್ನ ವರದಿಯನ್ನು ಮುಗಿಸುತ್ತೇನೆ.

**ಜೈ ಹಿಂದ!**

**ಅಂಕೋಲಾ**
**ದಿ.09–07–2011**

**ಕೃಷ್ಣಾನಂದ ವಿ.ಶೆಟ್ಟಿ**
**ಆಡಳಿತಾಧಿಕಾರಿ**
**ಕೆನರಾ ವೆಲ್‌ಫೆರ್ ಟ್ರಸ್ಟ್, ಅಂಕೋಲಾ**

# INSTITUTIONS RUN BY KANARA WELFARE TRUST

| Sl.No. | Name of the Institution | Place | Estd. | Head of the Institution |
|---|---|---|---|---|
| | **DEGREE COLLEGES** | | | |
| 1 | Gokhale Centenary College | Ankola | 1966 | Shri V.R.Kamat |
| 2 | Divekar College Of Commerce | Karwar | 1970 | Dr. R.G.Gundi |
| 3 | KWT's College of Education | Dandeli | 2005 | Smt. Jayashree V.Korati |
| 4 | B.C.A. College | Karwar | 2008 | Dr. R.G.Gundi |
| | **JUNIOR COLLEGES** | | | |
| 5 | Gokhale Centenary Pre-University College | Ankola | 2001 | Smt. Shailaja M.Bhat |
| 6 | Divekar Pre-University Commerce College | Karwar | 2001 | Smt. Veena J.Torke |
| 7 | Janata Vidyalaya Composite Junior College | Dandeli | 1971 | Shri M.S.Lamani |
| 8 | Janata Vidyalaya Composite Junior College | Kadtoka, Honnavar | 1971 | Shri Bhimraj R. |
| 9 | Janata Vidyalaya Composite Junior College | Shirali, Bhatkal | 1982 | Shri A.B.Ramrath |
| 10 | P.M. Composite Junior College | Ankola | 1993 | Shri R.V.Keni |
| 11 | Divekar Pre-University Science College | Karwar | 2004 | Smt. Veena J.Torke |
| | **HIGH SCHOOLS** | | | |
| 12 | People's Multipurpose High School | Ankola | 1953 | Shri R.V.Keni |
| 13 | People's Multipurpose High School (English Medium) | Ankola | 2011 | Shri R.V.Keni |
| 14 | Janata Vidyalaya | Baad-Kagal, Kumta | 1954 | Shri S.N.Nayak |
| 15 | Janata Vidyalaya | Shirali, Bhatkal | 1955 | Smt. Savitri Naik |
| 16 | Janata Vidyalaya | Dandeli | 1956 | Smt. Radhika Honnavar |
| 17 | Janata Vidyalaya | Kadwad, Karwar | 1960 | Shri F.B.Talwar |
| 18 | Janata Vidyalaya | Kasarkod, Honnavar | 1960 | Shri A.M.Mulla |
| 19 | Janata Vidyalaya | Murdeshwar, Bhatkal | 1960 | Shri P.V.Bhat |
| 20 | Janata Vidyalaya | Mirjan-Kodkani, Kumta | 1961 | Smt. Usha N.Nayak |
| 21 | Janata Vidyalaya | Kadtoka, Honnavar | 1962 | Smt. Usha G.Bhat |
| 22 | Janata Vidyalaya | Mudga, Karwar | 1963 | Shri S.G.Sheregar |
| 23 | Janata Vidyalaya | Dhareshwar, Kumta | 1964 | Smt. Laxmi Kasmadi |
| 24 | Janata Vidyalaya | Bedkani, Siddapur | 1965 | Shri A.R.Kondli |
| 25 | Smt. Kamalabai Pikale High School | Katgal, Kumta | 1966 | Shri I.V.Hebbar |
| 26 | Janata Vidyalaya | Anilgod, Honnavar | 1966 | Shri K.G.Hulswar |
| 27 | Janata Vidyalaya | Kulve-Baroor, Sirsi | 1968 | Shri T.D.Lamani |
| | **PRIMARY AND PRE-PRIMARY SCHOOLS** | | | |
| 28 | English Medium Primary School | Dandeli | 1958 | Smt. Anusuya C.Revankar |
| 29 | English Medium Nursery School | Dandeli | 1958 | Smt. Anusuya C.Revankar |
| 30 | Kannada Medium Primary School | Dandeli | 1999 | Smt. Anusuya C.Revankar |
| 31 | Kannada Medium Nursery School | Dandeli | 1999 | Smt. Anusuya C.Revankar |
| 32 | Thakkar Bapa Nursery School | Ankola | 2003 | Smt. Poornima S.Achari |
| 33 | Bala Vikasa Kendra | Mundgod | 1969 | Smt. Sujata N.Harihar |
| 34 | Dr. Dinkar Desai Primary School | Ankola | 2004 | Shri Sandeep R.Tengse |
| 35 | Janata Vidyalaya Dinkar Pre-Primary School | Dhareshwar, Kumta | 2005 | Smt. Radha K.Bhandari |
| 36 | Janata Vidyalaya Dinkar Primary School | Dhareshwar, Kumta | 2006 | Smt. Radha K.Bhandari |
| 37 | Shrimat Sadyojat Shankarashram Swamiji Balamandir | Shirali, Bhatkal | 2008 | Shri A.B.Ramrath |
| | **OTHER SOCIAL SERVICE INSTITUTIONS** | | | |
| 38 | Thakkar Bapa Tailoring School | Ankola | 1956 | Shri R.V.Keni |
| 39 | Anandashram Tailoring School | Mundgod | 1969 | Smt. Sujata N.Harihar |
| 40 | Dinkar Kalaniketan Music School | Ankola | 1990 | Shri V.G.Patil |
| 41 | Dinkar Kalaniketan Music School | Karwar | 1990 | Shri V.G.Patil |
| 42 | Satyasai Balawadi & Balavikas Kendra | Kodibag, Karwar | 1985 | Dr. R.G.Gundi |
| 43 | Computer Training Centre | Karwar | 1998 | Dr. R.G.Gundi |
| 44 | Computer Training Centre | Dandeli | 1998 | Shri M.S.Lamani |